International Journal of Kannada Research
of
Kannada Research

International Journal of Kannada Research
www.kannadajournal.com

**ISSN: 2454–5813**
IJKR 2021; 7(1): 78-85
© 2021 IJKR
www.kannadajournal.com
Received: 10-11-2020
Accepted: 12-12-2020

**ಡಾ.ಗುರುರಾಜ ಎಸ್. ನವಲಗುಂದ**
ಕನ್ನಡ ವಿಭಾಗ,
ಎಸ್.ಜೆ.ಎಂ.ವಿ.ಎಸ್. ಕಲಾ ಮತ್ತು ವಾಣಿಜ್ಯ, ಮಹಿಳಾ ಮಹಾವಿದ್ಯಾಲಯ, ಹುಬ್ಬಳ್ಳಿ

**Corresponding Author:**
**ಡಾ.ಗುರುರಾಜ ಎಸ್. ನವಲಗುಂದ**
ಕನ್ನಡ ವಿಭಾಗ,
ಎಸ್.ಜೆ.ಎಂ.ವಿ.ಎಸ್. ಕಲಾ ಮತ್ತು ವಾಣಿಜ್ಯ, ಮಹಿಳಾ ಮಹಾವಿದ್ಯಾಲಯ, ಹುಬ್ಬಳ್ಳಿ

# ಮಧ್ಯಕಾಲೀನ ಕರ್ನಾಟಕದಲ್ಲಿ ಕೃಷಿ ಮತ್ತು ವರ್ತಕರು (ಶಾಸನಗಳನ್ನು ಅನುಲಕ್ಷಿಸಿ)

**ಡಾ.ಗುರುರಾಜ ಎಸ್. ನವಲಗುಂದ**

ಮಧ್ಯಕಾಲೀನ ಕರ್ನಾಟಕದಲ್ಲಿ ಭೂ ಆಧಾರಿತ ಅರ್ಥವ್ಯವಸ್ಥೆ ಜಾರಿಯಲ್ಲಿತ್ತು. ಈ ಭೂ ಆಧಾರಿತ ಅರ್ಥವ್ಯವಸ್ಥೆಯು ಸಾಮಾಜಿಕ ಆರ್ಥಿಕ ಪರಿವರ್ತನೆಯನ್ನು ಸೂಚಿಸುತ್ತದೆ. ಬುಡಕಟ್ಟು ಸಮಾಜ ಕೃಷಿವ್ಯವಸ್ಥೆಗೆ ಹಲವಾರು ಬದಲಾವಣೆಗಳೊಂದಿಗೆ ಪರಿವರ್ತನೆಗೊಂಡಿರುವುದು ರಾಜ್ಯವ್ಯವಸ್ಥೆಯ ಮೇಲೆ ಮಹತ್ತರ ಪರಿಣಾಮಗಳನ್ನು ಬೀರಿತು. ಈ ಕಾಲದಲ್ಲಿ ಸ್ವಂತ ಭೂಮಿಯನ್ನು ಹೊಂದುವ ಪ್ರಕ್ರಿಯೆಗಳು ಕಾಣಿಸಿಕೊಳ್ಳಲಾರಂಭಿಸಿದ್ದವು. ಭೂಮಿಯನ್ನು ಹೊಂದುವುದು ಸಮಾಜದಲ್ಲಿ ಗೌರವದ ಪ್ರಶ್ನೆಯೂ ಆಗಿತ್ತು. ಪ್ರತಿಯೊಬ್ಬ ವ್ಯಕ್ತಿಯೂ ತನ್ನದೇ ಆದ ಭೂಮಿಯನ್ನು ಹೊಂದಲು ಆಸೆಪಡುತ್ತಿದ್ದುದು ಅಂದಿನ ಸಹಜ ಬೆಳವಣಿಗೆಯಾಗಿತ್ತು. ಅರಸರಂತೆ ಖಾಸಗಿ ವ್ಯಕ್ತಿಗಳು ಸ್ವಂತ ಭೂಮಿಯನ್ನು ಹೊಂದಿರುತ್ತಿದ್ದರು. ಖಾಸಗಿ ಭೂಮಾಲೀಕರಲ್ಲೂ ಅನೇಕ ವರ್ಗಗಳಿದ್ದವು. ಅವುಗಳೆಂದರೆ, ಶ್ರೀಮಂತ ಭೂಮಾಲೀಕರು, ಮಧ್ಯಮ ಭೂಮಾಲೀಕರು ಹಾಗೂ ಬಡ ಭೂಮಾಲೀಕರು. ಈ ಭೂಮಾಲೀಕರು ತಮ್ಮ ಭೂಮಿಗೆ ಸಂಬಂಧಿಸಿದ ಕೆಲಸ ಕಾರ್ಯಗಳನ್ನು ಸ್ವತಂತ್ರವಾಗಿಯೇ ಮಾಡಬಹುದಾಗಿತ್ತು. ರಾಜಪ್ರಭುತ್ವಕ್ಕೆ ಖಾಸಗಿ ಒಡೆಯರ ಭೂಮಿಯ ಮೇಲೆ ತೆರಿಗೆ ವಿಧಿಸುವ ಹಾಗೂ ಅವರ ಹಕ್ಕುಗಳನ್ನು ಮಿತಿಗೊಳಿಸುವ ಅಧಿಕಾರವಿತ್ತು. ಭೂಮಿಯ ಮೇಲೆ ಖಾಸಗಿ ಒಡೆತನವನ್ನು ಸ್ಥಾಪಿಸಬೇಕಾದರೆ ಹಲವು ಬೇಡಿಕೆಗಳನ್ನು ಪೂರೈಸಬೇಕಾಗುತ್ತಿತ್ತು. ಬೇಡಿಕೆಗಳು ಪ್ರಭುತ್ವದ ಹಾಗೂ ಮಧ್ಯಮವರ್ಗದ ರೂಪುಗೊಳ್ಳುವಿಕೆಯ ಸ್ವರೂಪದಿಂದ ಕೂಡಿರುತ್ತಿದ್ದವು. ಈ ಹಿನ್ನೆಲೆಯಲ್ಲಿ ಭೂಮಿಯನ್ನು ಮಾರಾಟ ಮಾಡುವ, ದಾನ ನೀಡುವ ಹಾಗೂ ಕಾಣಿಕೆ ರೂಪದಲ್ಲಿ ಕೊಡುವ ಹಕ್ಕು ಪ್ರಾಪ್ತವಾಗುತ್ತಿತ್ತು. ಕಾಡನ್ನು ಕಡಿದು ಕೃಷಿಭೂಮಿಯನ್ನಾಗಿ ರೂಪಾಂತರಿಸುವ ಪ್ರಕ್ರಿಯೆಯು ನಮಗೆ ಹೊಸತೇನೂ ಅಲ್ಲ. ರಾಮಾಯಣದ ಕಾಲದಲ್ಲಿಯೂ ಕಾಡು ಸುತ್ತವ ನೆಪದಲ್ಲಿ ಸಾಮ್ರಾಜ್ಯ ಮತ್ತು ಕೃಷಿಯನ್ನು ಅಧಿಕೃತವಾಗಿಸುವ ಕ್ರಿಯೆಗಳು ನಡೆದುಕೊಂಡು ಬಂದಿವೆ. ಹೀಗೆ ಕಾಡುಗಳನ್ನು ಜಮೀನುಗಳಾಗಿ ರೂಪಾಂತರಿಸುವ ಪ್ರಕ್ರಿಯೆಯು ಮಧ್ಯಕಾಲ ಘಟ್ಟದಲ್ಲೂ ಜರುಗಿರುವುದು ಮತ್ತು ಇಂದಿಗೂ ಮುಂದುವರೆದು ಬಂದಿರುವುದನ್ನು ನಾವು ಗುರುತಿಸುತ್ತೇವೆ. ಹೀಗೆ ರೂಪಾಂತರಿಸುವುದರ ಮುಖೇನ ರಾಜ್ಯದ ಆದಾಯವನ್ನು ಹೆಚ್ಚಿಸುವುದು ಇದರ ಹಿಂದಿನ ಉದ್ದೇಶವಾಗಿತ್ತು. ಕಾಡುಗಳನ್ನು ಕಡಿದು ಕೃಷಿಯೋಗ್ಯ ಭೂಮಿಯನ್ನಾಗಿಸಲು ರಾಜಪ್ರಭುತ್ವವು ಜನಸಾಮಾನ್ಯರಿಗೆ ಸಹಾಯ–ಸಹಕಾರಗಳನ್ನು ನೀಡುವುದು ಗಮನಾರ್ಹವಾಗಿತ್ತು.

ಒಂದು ಇಡಿಯಾದ ವ್ಯವಸ್ಥೆಯನ್ನು ಯಾವ ರೀತಿಯಲ್ಲಿ ಹಿಡಿತದಲ್ಲಿಟ್ಟುಕೊಳ್ಳಬಹುದು ಎಂಬುದಕ್ಕೆ ಉತ್ಪಾದಕ ವಲಯದೊಂದಿಗಿನ ಅನುತ್ಪಾದಕ ವ್ಯವಸ್ಥೆಯ ಒಳಸಂಬಂಧಗಳನ್ನು ಸೂಕ್ಷ್ಮವಾಗಿ ಗಮನಿಸಬೇಕಾಗುತ್ತದೆ. ಹಾಗೆಯೇ ಈ ಹಿನ್ನೆಲೆಯಲ್ಲಿ ಉತ್ಪಾದಕ ಮತ್ತು ಅನುತ್ಪಾದಕರನ್ನು ಕುರಿತ ನಾಲ್ಕು ಅಂಶಗಳು ಪ್ರಧಾನಪಾತ್ರವಹಿಸುತ್ತವೆ. ಅವುಗಳೆಂದರೆ, 1. ಊಳಿಗಮಾನ್ಯತೆ, 2. ಭೂಮಾಲಿಕತ್ವ, 3. ಮಧ್ಯವರ್ತಿಗಳು ಹಾಗೂ 4. ದಾನ. ಇವುಗಳಿಂದ ಕೇವಲ ಉತ್ಪಾದಕ ಮತ್ತು ಅನುತ್ಪಾದಕರ ಮಧ್ಯದ ಸಂಬಂಧಗಳನ್ನು ನೋಡದೆ, ಇವರು ಸಾಮಾಜಿಕ ವ್ಯವಸ್ಥೆಯಲ್ಲಿ ಹೊಂದಿದ ಹಿಡಿತ, ಆರ್ಥಿಕತೆ ಹಾಗೂ ಸಾಮಾಜಿಕ ಸ್ಥಿತ್ಯಂತರಗಳ ಮೇಲೆ ಅವರು ಬೀರಿದ ಪರಿಣಾಮಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ವರ್ಣವ್ಯವಸ್ಥೆಯ ಮೂಲದಲ್ಲಿ ಬರುವ ನಾಲ್ಕು ವರ್ಣಗಳು ತಮ್ಮದಲ್ಲದ ವೃತ್ತಿಗಳನ್ನು ಅವಲಂಬಿಸಿರುತ್ತಿದ್ದರು ಎನ್ನುವುದು ಹಲವಾರು ಶಾಸನಗಳಿಂದ ಮತ್ತು ಕಾವ್ಯಗಳಿಂದ ತಿಳಿದುಬರುತ್ತದೆ. ಶೂದ್ರನೊಬ್ಬ ರಾಜನಾದರೆ ಅಥವಾ ವರ್ತಕನಾದರೆ ಅವನು ತನ್ನನ್ನು ಕ್ಷತ್ರಿಯನೆಂದೋ, ವೈಶ್ಯನೆಂದೋ

ಕರೆದುಕೊಳ್ಳಲು ಅಂತಹ ಸಾಮಾಜಿಕ ಅಡೆತಡೆಗಳೇನೂ ಇರಲಿಲ್ಲ. ವೈದಿಕ(ಬ್ರಾಹ್ಮಣ)ರು ಈ ವ್ಯವಸ್ಥೆಯಲ್ಲಿ ಮೇಲಿನ ಸ್ಥಾನವನ್ನು ಪಡೆದಿದ್ದರು ಎನ್ನುವುದಂತೂ ನಿಜ. ಉಳಿದ ವೃತ್ತಿಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳನ್ನು ಕಾಣಲು ಸಾಧ್ಯವಿರಲಿಲ್ಲ. ಆದರೆ ಬ್ರಾಹ್ಮಣರ ಅಂತಸ್ತು, ಸ್ಥಿತಿಗಳು ಯಾವ ಕಾರಣಕ್ಕೂ ಏರುಪೇರು ಕಾಣುತ್ತಿರಲಿಲ್ಲ. ಆದರೆ ಅವರ ಪ್ರಭಾವಗಳು ಉನ್ನತವಾಗಿಯೇ ಇದ್ದವು. ಇವುಗಳಿಂದ ಸಮಾಜದಲ್ಲಿ ಅಸ್ಥಿರತೆ ತಲೆದೋರುವುದರಲ್ಲಿ ಸಹಕಾರಿಯಾಗುತ್ತಿತ್ತು.

ಇಂತಹ ಸಾಮಾಜಿಕ ವರ್ಣವ್ಯವಸ್ಥೆಯಲ್ಲಿ ವೈದಿಕರ ಹೊರತಾಗಿ ಉಳಿದ ಮೂರು ವರ್ಣಗಳು ವೈದಿಕ(ಬ್ರಾಹ್ಮಣ)ರ ಮೂಲಕವೇ ತಮ್ಮ ಅಸ್ತಿತ್ವವನ್ನು ಗುರುತಿಸಿಕೊಳ್ಳಬೇಕಾದ ಅನಿವಾರ್ಯತೆಗೆ ಒಳಗಾಗಿದ್ದವು. ಈ ಹಿನ್ನೆಲೆಯಲ್ಲಿ ವೈದಿಕರು ಸದಾ ಕಾಲ ಈ ರೀತಿಯ ವ್ಯವಸ್ಥೆಯೊಂದನ್ನು ಅಳಿದು ಹೋಗದಂತೆ ಕಾಪಾಡಿಕೊಳ್ಳಲು ಪ್ರಯತ್ನಶೀಲರಾಗಿರುತ್ತಿದ್ದರು. ಈ ಪ್ರಕ್ರಿಯೆಗಳು ಅವರ ಸಾಮಾಜಿಕ ಮತ್ತು ಆರ್ಥಿಕ ಪ್ರಗತಿಗೆ ಅಡ್ಡಿಯಾಗಿದ್ದವು. ಆದರೆ ಬ್ರಾಹ್ಮಣ್ಯವೆನ್ನುವುದು ಎಲ್ಲಾ ಕಾಲದಲ್ಲೂ ಸಾಮಾಜಿಕ ಸ್ಥಿತಿಯನ್ನು ಗುರುತಿಸುವ ಕಾರ್ಯವಾಗಿತ್ತು. ಹೀಗಾಗಿ ಬ್ರಾಹ್ಮಣರಲ್ಲಿಯೂ ಸ್ತರಗಳಿದ್ದವು. ಉನ್ನತ ದರ್ಜೆಯ ಮತ್ತು ಕೆಳದರ್ಜೆಯ ಬ್ರಾಹ್ಮಣರಿರುತ್ತಿದ್ದರು.[1] ಸಮಾಜದಲ್ಲಿ ಉನ್ನತಮಟ್ಟದಲ್ಲಿ ಸ್ಥಾನಮಾನಗಳನ್ನು ಹೊಂದಿದ್ದ ಈ ವೈದಿಕರ ಧಾರ್ಮಿಕ, ರಾಜಕೀಯ ಹಾಗೂ ಆರ್ಥಿಕ ಸ್ಥಾನಮಾನಗಳ ಮಧ್ಯ ಹಲವು ಉದ್ದೇಶಗಳಲ್ಲಿ ಸಂಬಂಧಗಳು ಏರ್ಪಟ್ಟಿರುತ್ತಿದ್ದವು. ಆಡಳಿತಾತ್ಮಕವಾಗಿದ್ದ ರಾಜರು, ಅಧಿಕಾರಿಗಳು ಈ ಪುರೋಹಿತಶಾಹಿಗೆ ಉಡುಗೊರೆ ರೂಪದಲ್ಲಿ ಭೂಮಿದಾನವನ್ನು ನೀಡುತ್ತಿದ್ದರು. ಹೀಗೆ ಇಡೀ ವ್ಯವಸ್ಥೆಯನ್ನು ತಮ್ಮ ಕೈವಶ ಮಾಡಿಕೊಂಡ ಪುರೋಹಿತಶಾಹಿಯು ಇಡೀ ವ್ಯವಸ್ಥೆಯನ್ನು ದಾನದ ರೂಪದಲ್ಲಿಯೇ ಹಿಡಿತದಲ್ಲಿಟ್ಟು ಕೊಳ್ಳುವಂತಾಯಿತು. ಈ ಎಲ್ಲವೂ ವೈದಿಕರು ವ್ಯವಸ್ಥಿತವಾಗಿ ರೂಪಿಸಿದ ಸಂಚುಗಳ ರೀತಿಯಲ್ಲಿ ಗೋಚರಿಸುತ್ತವೆ. ಅಂದರೆ ಪಾಪ–ಪುಣ್ಯ ಎಂಬ ಧಾರ್ಮಿಕ ನಂಬಿಕೆಯನ್ನು ಸಮಾಜದಲ್ಲಿ ಬಿತ್ತಿ, ಅದರಿಂದ ತಮ್ಮ ಲಾಭವನ್ನು ಮಾಡಿಕೊಳ್ಳುವ ದುರಾಲೋಚನೆಯು ಇಲ್ಲಿ ಎದ್ದು ಕಾಣುತ್ತದೆ. ಈ ಸಂದರ್ಭದಲ್ಲಿ ವೈದಿಕಧರ್ಮದ ಮಾನವ ವಿರೋಧಿ ನಿಲುವನ್ನು ಪ್ರತಿಭಟಿಸಿ ಜನ್ಮ ತಾಳಿದ ಸಮಕಾಲೀನ ಧರ್ಮಗಳಿಗೆ ಹಲವು ರೀತಿಯಲ್ಲಿ ತಮ್ಮ ಇತಿಮಿತಿಗಗಳ ವ್ಯಾಪ್ತಿಯಲ್ಲಿಯೇ ವೈದಿಕಧರ್ಮದ ಪ್ರತಿಯಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ ಸ್ಥಾನಮಾನಗಳನ್ನು ಸೃಷ್ಟಿಸಿಕೊಳ್ಳಬೇಕಾದ ಅನಿವಾರ್ಯವಾದ ವಾತಾವರಣವನ್ನು ಸ್ವಯಂಪ್ರೇರಿತವಾಗಿ ಸ್ಥಾಪಿಸಿಕೊಳ್ಳಬೇಕಾಗಿತ್ತು.

ಮಧ್ಯಕರ್ನಾಟಕದಲ್ಲಿ ವ್ಯವಸಾಯ ಅತಿ ಪ್ರಮುಖವಾದ ವೃತ್ತಿಗಳಲ್ಲಿ ಒಂದಾಗಿತ್ತು. ದೇವಸ್ಥಾನಗಳಿಗೆ, ಅಧಿಕಾರಿಗಳಿಗೆ, ಮಠಗಳಿಗೆ, ವೀರರಿಗೆ ನೀಡಿರುವ ದಾನಗಳಲ್ಲೆಲ್ಲಾ ಹೆಚ್ಚಾಗಿ ಭೂದಾನವೇ ಎದ್ದು ಕಾಣುತ್ತದೆ. 'ಭೂದಾನಕ್ಕೆ ಸಮಾನವಾದುದು ಯಾವ ದಾನವಿಲ್ಲ. ಭೂದಾನಕ್ಕೆ ಭೂಮಿಗೆ ಸಮನಾದ ಐಶ್ವರ್ಯವಿಲ್ಲ'. ಹಾಗಾಗಿ ಅದನ್ನು ಪದೇ ಪದೇ ದಾನವಾಗಿ ವೈದಿಕರಿಗೆ ಕೊಡಬೇಕು ಎಂಬ ಉದ್ದೇಶದಿಂದ 'ನಾಸ್ತಿ ಭೂಮಿ ಸಮೋ ದಾನಮ್ ನಾಸ್ತಿ ಭೂಮಿ ಸಮೇ ನಿಧಿಃ'[2] ಎಂದು ಶಿಕಾರಿಪುರದ ಶಾಸನವೊಂದು ಹೇಳುತ್ತದೆ. ಭೂಮಿಯನ್ನು 'ಭೂಮಿತಾಯಿ' ಎಂದು ಕರೆಯುವ ರೂಢಿ ಈ ಕಾಲದಲ್ಲಿ ಕಂಡುಬಂದಿದೆ. ಜೀವಕೋಟಿಗೆ ಆಹಾರವನ್ನು ಒದಗಿಸುವ ಭೂಮಿಯ ಬಗೆಗೆ ಬಹು ಪೂಜ್ಯ ಭಾವನೆ ಎಲ್ಲ ಕಾಲಘಟ್ಟದಲ್ಲಿಯೂ ಲಭ್ಯವಾಗುತ್ತದೆ. ಶಾಸನಗಳಲ್ಲಿ ಅನೇಕ ರೀತಿಯ ಭೂಮಿಗಳ ವಿಷಯ ಪ್ರಸ್ತಾಪಿತವಾಗಿದೆ. ಸಾಮಾನ್ಯವಾಗಿ ಜಮೀನುಗಳನ್ನು ದೇವಮಾತೃಕ ಮತ್ತು ನದೀಮಾತೃಕವೆಂದು ಎರಡು ವಿಭಾಗಗಳಾಗಿ ವಿಂಗಡಿಸಿರುವುದು ಕಂಡುಬರುತ್ತದೆ. ಸಾಮಾನ್ಯವಾಗಿ ಶಾಸನಗಳು ದೇವಮಾತೃಕವನ್ನು 'ಕಾಡಾರಂಭ' ಎಂದು ಗುರುತಿಸಿವೆ. ನದೀಮಾತೃಕವನ್ನು 'ನೀರಾರಂಭ'[3] ಎಂದು ಗುರುತಿಸಿವೆ. ಮಳೆಯ ನೀರನ್ನು ಆಶ್ರಯಸಿ ಬೆಳೆಯುವ ಜಮೀನುಗಳನ್ನು ದೇವಮಾತೃಕಗಳೆಂದೂ, ನದಿ, ಕೆರೆ ಮುಂತಾದವುಗಳನ್ನು ಆಶ್ರಯಿಸಿ ಬೆಳೆಯುವ ಜಮೀನುಗಳನ್ನು ನದೀಮಾತೃಕಗಳೆಂದು ಗುರುತಿಸುತ್ತಾರೆ. ಈ ವಿಭಜನೆಯನ್ನೇ ಕೆಲವು ಕನ್ನಡ ಶಾಸನಗಳಲ್ಲಿ ಬೆದ್ದಲೆ ಮತ್ತು ಗದ್ದೆಗಳೆಂದು ಕರೆದಿರುವುದು[4] ಕನ್ನಡದ ಹಲವು ಶಾಸನಗಳು ಅನೇಕ ರೀತಿಯ ಕೃಷಿಭೂಮಿಗಳನ್ನು ಅವುಗಳ ಬಣ್ಣ ಮತ್ತು ಸ್ವರೂಪಗಳ ಮೇಲೆ ಬೆಳಕು ಚೆಲ್ಲುತ್ತವೆ. ಕ್ರಿಸ್ತಶಕ 1207ರ ಕಡೂರು ಶಾಸನವೊಂದು 'ಕಯ್ಯಿ'(ಕೆಯಿ)[5], ಕ್ರಿಸ್ತಶಕ 1259ರ ಹಾವೇರಿ ಶಾಸನದಲ್ಲಿ 'ಕೆಂಗಾಡು'[6], ಕ್ರಿಸ್ತಶಕ 1148ರ ಸೌದತ್ತಿ ಶಾಸನವು 'ಕೆಯಿ'[7], ಅದೇ ರೀತಿ ಭಿನ್ನತೆಗಳು ವಿಶೇಷವಾಗಿ ಕೆಲವು ಶಾಸನಗಳಲ್ಲಿ ದೊರಕುತ್ತವೆ. ಅದರಲ್ಲಿ ಬಾರಕೂರು ಶಾಸನವು 'ಮೆಕ್ಕೆಭೂಮಿ'[8] ಎಂಬ ಮಣ್ಣನ್ನು ಉಲ್ಲೇಖಿಸಿದೆ. ಆರ್ಥಿಕವಾಗಿ ಹೆಚ್ಚು ಆದಾಯ ತಂದುಕೊಡುವ ಕೆಲವು ತೋಟಗಳನ್ನು ಹೆಸರಿಸಿವೆ. ಅದರಲ್ಲಿ ತೆಂಗು, ಅಡಕೆ, ಮಾವಿನ ತೋಟಗಳನ್ನು ಕ್ರಿ.ಶ. 1154ರ ಚನ್ನರಾಯಪಟ್ಟಣದ ಒಂದು ಶಾಸನವು ಉಲ್ಲೇಖಿಸಿದೆ.[9] ಸಾಮಾನ್ಯವಾಗಿ ಸೊರಬ,[10] ಚಿಕ್ಕನಾಯಕನಹಳ್ಳಿ[11] ಸೇರಿದಂತೆ ಅನೇಕ ಶಾಸನಗಳಲ್ಲಿ ಕೆರೆಯ ಪಕ್ಕದ, ಕೆಳಗಿನ ಭೂಮಿಯಗಳ ಪ್ರಸ್ತಾಪವು ಕಂಡುಬರುತ್ತದೆ. ಬಹುಶಃ ಇಂತಹ ಭೂಮಿಗಳಿಗೆ ಸಹಜವಾಗಿ ಕೆರೆಯ ನೀರು ದೊರೆಯುವುದರಿಂದ ಈ ಭೂಮಿಯಲ್ಲಿ ಹೆಚ್ಚಿನ ಬೆಳೆ ಬೆಳೆಯುತ್ತಿದ್ದರು. ಆ ಕಾರಣಕ್ಕಾಗಿ ಅವುಗಳ ಉಲ್ಲೇಖಗಳು ಹೆಚ್ಚು ಹೆಚ್ಚು ಕಂಡುಬರುತ್ತವೆ. ಕಾರಣ ನದಿಗಳು ಹರಿಯದೆ ಇರುವ ಪ್ರದೇಶಗಳ ಕೃಷಿಕರು ಕೆರೆ ಮತ್ತು ಬಾವಿಗಳನ್ನು ನೀರಾವರಿಗಾಗಿ ಅವಲಂಬಿಸಬೇಕಾಗಿತ್ತು. ಕೆರೆಗಳಲ್ಲಿ ಮಳೆಯ ನೀರನ್ನು ಸಂಗ್ರಹಿಸಲಾಗುತ್ತಿತ್ತು. ಈ ಹಿನ್ನೆಲೆಯಲ್ಲಿ ನೀರಿನ ಸರಬರಾಜು ಹೊಲಗದ್ದೆಗಳಿಗೆ ಅಧಿಕವಾಗಿ ಕೆರೆಗಳ ಮೂಲಕವೇ ಆಗಬೇಕಿತ್ತು. ಕೆರೆಗಳ ನಿರ್ಮಾಣ ದೇವಸ್ಥಾನಗಳ ನಿರ್ಮಾಣದಂತೆ ಅವುಗಳು ಪುಣ್ಯಕಾರ್ಯವೆಂದು ಬಿಂಬಿಸಲಾಗುತ್ತಿತ್ತು.

ಈ ಕೆರೆಗಳ ನಿರ್ಮಾಣವನ್ನು ಸಾಮಾನ್ಯಜನರು ಕಟ್ಟಿಸಲು ಆಗುತ್ತಿರಲಿಲ್ಲ. ಅರಸರು ಅಥವಾ ಇತರ ಶ್ರೀಮಂತ ಖಾಸಗಿ ವ್ಯಕ್ತಿಗಳು ಕಟ್ಟಿಸುತ್ತಿದ್ದರು. ಪ್ರತಿಯೊಂದು ಹಳ್ಳಿಯಲ್ಲಿಯೂ ಅಲ್ಲಿನ ಬೇಸಾಯದ ಭೂಮಿಯ ವಿಸ್ತಾರ ಹಾಗೂ ಬೆಳೆಯುವ ಬೆಳೆ ಇವುಗಳನ್ನು ಅವಲಂಬಿಸಿಕೊಂಡು ಕೆರೆಗಳಿರುತ್ತಿದ್ದವು. ಪ್ರತಿಯೊಂದು ಕೆರೆಗೂ ಹೆಸರುಗಳಿರುತ್ತಿದ್ದವು. ಕೆರೆಗಳನ್ನು ಕಟ್ಟಿಸಿದವರ ಹೆಸರು ಅಥವಾ ಯಾರ ಗೌರವಾರ್ಥವಾಗಿ ಕಟ್ಟಿಸಲಾಗಿದೆಯೋ ಅವರ ಹೆಸರನ್ನು ಆಯಾ ಕೆರೆಗಳಿಗೆ ಇಡುವುದು ರೂಢಿಯಲ್ಲಿತ್ತು. ಇದಕ್ಕೆ ಉತ್ತಮ ಉದಾಹರಣೆಯೆಂದರೆ, ಕ್ರಿಸ್ತಶಕ 1186ರ ಬೇಲೂರು ಶಾಸನದಲ್ಲಿ ಪ್ರಧಾನ ದಂಡನಾಯಕನು ಕಟ್ಟಿಸಿದ ನಾಲ್ಕು ಕೆರೆಗಳು. ದಂಡನಾಯಕನು ತನ್ನ ತಂದೆ, ತಾಯಿ, ಸಹೋದರ ಹಾಗೂ ತನ್ನದೇ ಹೆಸರಿನಲ್ಲಿ ರುದ್ರ ಸಮುದ್ರ, ಗಂಗ ಸಮುದ್ರ, ಅಚ್ಯುತ ಸಮುದ್ರ ಹಾಗೂ ವೀರ ಸಮುದ್ರ ಎನ್ನುವ ಕೆರೆಗಳನ್ನು ನಿರ್ಮಿಸಿದ ಬಗ್ಗೆ ತಿಳಿದು ಬರುತ್ತದೆ.[12] ಈ ರೀತಿಯಾಗಿ ಕೆರೆ–ಬಾವಿಗಳನ್ನು ಕಟ್ಟಿಸಿ ಭೂಮಿಯಲ್ಲಿ ಬೆಳೆಯನ್ನು ತಗೆಯುತ್ತಿದ್ದರು. ಸಾಮಾನ್ಯವಾಗಿ ಕೆರೆ–ಬಾವಿಗಳನ್ನು ಕಟ್ಟಿಸುವವರು ಶ್ರೀಮಂತರಾಗಿರುತ್ತದ್ದರೇ ಹೊರತು ಜನಸಾಮಾನ್ಯರಾಗಿರಲಿಲ್ಲ. ಇದೊಂದು ರೀತಿಯಲ್ಲಿ ಊಳಿಗಮಾನ್ಯ ವ್ಯವಸ್ಥೆಯ ಸೃಷ್ಟಿಯಾಗಿರುತ್ತಿತ್ತು. ಸಮಾಜದಲ್ಲಿ ಒಳ್ಳೆಯ ಸ್ಥಾನಮಾನಗಳನ್ನು ಉಳ್ಳವರೇ ತಮ್ಮ ಅದೇ ಸ್ಥಿತಿಯನ್ನು ಮುಂದುವರೆಸಿಕೊಂಡು ಹೋಗಬೇಕಾಗಿರುತ್ತಿತ್ತು. ಅಲ್ಲದೆ ತಮ್ಮ ನೂರಾರು, ಸಾವಿರಾರು ಎಕರೆ ಭೂಮಿಗೆ ನೀರು ಹರಿಸಬೇಕಾಗಿತ್ತು.

ಅದರಿಂದ ಕೆರೆ–ಬಾವಿಗಳನ್ನು ತೋಡಿಸುತ್ತಿದ್ದರು.

ಕೆರೆಗಳನ್ನು ನಿರ್ಮಿಸುವುದಷ್ಟೆ ಅಲ್ಲದೇ, ಆ ಕೆರೆಗಳಲ್ಲಿ ಕೆಸರು ತುಂಬಿಕೊಂಡು ನೀರು ನಿಲ್ಲುವ ಪ್ರಮಾಣ ಕಡಿಮೆಯಾದಾಗ ಕೆಸರನ್ನು ಕೆರೆಗಳಿಂದ ಹೊರತೆಗೆಯುವ ಕಾರ್ಯವೂ ನಡೆಯುತ್ತಿತ್ತು. ಆದರೆ ಕೆರೆ–ಬಾವಿಗಳನ್ನು ಸ್ವಚ್ಛವಾಗಿರಿಸುವ ಸಂಬಂಧ ಅಲ್ಲಿ ಕೆರೆ–ಬಾವಿಗಳ ಹೂಳು ತೆಗೆಯಲು ಮತ್ತು ಅದರ ಕಾವಲು ಕಾಯಲು ಕಾವಲುಗಾರರನ್ನು ನೇಮಕ ಮಾಡಿಕೊಳ್ಳುತ್ತಿದ್ದರು. ಕೆರೆಯಿಂದ ಹೂಳನ್ನು ತೆಗೆಯುವ ಕೆಲಸಕ್ಕಾಗಿ ಬಂಡಿಯನ್ನು ದಾನ ನೀಡುತ್ತಿದ್ದರು ಹಾಗೂ ಆ ಬಂಡಿಗಳ ಚಾಲಕರ ನಿರ್ವಹಣೆಗಾಗಿ ಭೂಮಿಯನ್ನು ದಾನ ನೀಡಿರುವ ಉಲ್ಲೇಖಗಳನ್ನು ಕುರಿತಂತೆ ಕ್ರಿಸ್ತಶಕ 1234ರ ಅರಸೀಕೆರೆ,[13] ಕ್ರಿಸ್ತಶಕ 1237ರ ನಾಗಮಂಗಲ[14] ಶಾಸನಗಳು ಬೆಳಕು ಚೆಲ್ಲುತ್ತವೆ. ಕ್ರಿಸ್ತಶಕ 1367ರ ಒಂದು ಶಾಸನದಲ್ಲಿ ಕೆರೆಯ ಹೂಳುಮಣ್ಣನ್ನು ತೆಗೆಯಲು ಒಂದು ಕೋಣದ ಗಾಡಿಯನ್ನು ಗೊತ್ತು ಮಾಡಿದ್ದರೆಂದೂ, ಆ ಗಾಡಿಯವನಿಗೆ ಜಮೀನುಗಳ ಹಿಡುವಳಿದಾರರು ಕ್ಲುಪ್ತವಾಗಿ ವರಮಾನವನ್ನು ಸಲ್ಲಿಸುತ್ತಿದ್ದರೆಂದೂ ತಿಳಿದುಬರುತ್ತದೆ[15] ಹಾಗೂ ಕ್ರಿಸ್ತಶಕ 1188ರ ಹರಪನಹಳ್ಳಿ[16]ಯ ಶಾಸನಗಳು ಕಟ್ಟಿಸಿದ ಕೆರೆಗಳ ಸಂರಕ್ಷಣೆಗಾಗಿ ರಕ್ಷಣಾಗೋಡೆಗಳನ್ನು ನಿರ್ಮಿಸಿದ ವಿಷಯವನ್ನು ಪ್ರಸ್ತಾಪಿಸಿವೆ. ಹೀಗೆ ಕೆರೆಗಳಿಗಾಗಿ ಬಿಡುತ್ತಿದ್ದ ಜಮೀನನ್ನು 'ಬಿತ್ತುವಟ್ಟ'ವೆಂದು, ಆ ಜಮೀನಿನ ಉತ್ಪನ್ನವನ್ನು ಕೆರೆಯ ಸಂರಕ್ಷಣೆಗೆ ಮತ್ತು ದುರಸ್ಥಿಗೆ ಬಳಸಬೇಕೆಂಬ ಉದ್ದೇಶ ಅವರಲ್ಲಿದ್ದಂತಿದೆ. ಬಿತ್ತುವಟ್ಟದ ಉತ್ಪನ್ನವನ್ನು ಕೆರೆಗೆ ಮಾತ್ರ ಬಳಸಬೇಕು ಅದನ್ನು ಆಸೆಪಟ್ಟರೆ ಅವರಿಗೆ ನರಕ ಪ್ರಾಪ್ತಿಯಾಗುವುದು ಎಂದು ಕ್ರಿಸ್ತಶಕ 1180ರ ಒಂದು ಶಾಸನ ಎಚ್ಚರಿಸುತ್ತದೆ.[17] ಆರ್ಥಿಕವಾಗಿ ಸಬಲರಲ್ಲದ ಜನಸಾಮಾನ್ಯರು ಎಲ್ಲಿ ಈ ಕೆರೆಗಳನ್ನು ಹಾಗೂ ತಮ್ಮ ಭೂಮಿಯನ್ನು ಆಕ್ರಮಿಸಿಕೊಂಡು ಬಿಡುತ್ತಾರೆಯೋ ಎಂಬ ಭಯ ಈ ಹಿಡುವಳಿದಾರರಲ್ಲಿ ಸದಾ ಕಾಡುತ್ತಿರುತ್ತಿತ್ತು. ಈ ಕಾರಣಕ್ಕಾಗಿ ಬಿತ್ತುವಟ್ಟ ಎಂಬ ನಿಯಮಕ್ಕೆ ಧರ್ಮದ ಲೇಪವನ್ನು ಬಳಿದು ಅದರಿಂದ ಜನಸಾಮಾನ್ಯರು ತಮ್ಮ ತಂಟೆಗೆ ಬರದಂತೆ ಎಚ್ಚರ ವಹಿಸುವ ತಂತ್ರ ಇದರಲ್ಲಿ ಅಡಗಿರುವಂತೆ ಕಂಡುಬರುತ್ತದೆ. ಅಂದರೆ ಮನುಷ್ಯ ಸಂಘಜೀವಿ ಹಾಗೂ ಭಾವನಾ ಜೀವಿಯೂ ಹೌದು ಹಾಗಾಗಿ ಅವನಲ್ಲಿ ಇಲ್ಲದ ಧರ್ಮ, ದೇವರು ಎಂಬಂತ ಹಲವು ಭಯಾನಕಗಳನ್ನು ಸೃಷ್ಟಿಸಿ, ಅವುಗಳ ಮೂಲಕ ಪಾಪಪ್ರಜ್ಞೆಯನ್ನು ಬಿತ್ತಿ ಅವರುಗಳಿಂದ ಸುರಕ್ಷಿತ ಅಂತರವನ್ನು ಕಾಪಾಡುವ ಕೆಲಸವನ್ನು ಈ ಹಿಡುವಳಿದಾರರು ಮಾಡಿಕೊಳ್ಳುತ್ತಿದ್ದರು. ಇವರಿಗೆ ಪೂರಕವಾಗಿ ಪುರೋಹಿತಶಾಹಿಯು ಕಾರ್ಯ ನಿರ್ವಹಿಸುತ್ತಿತ್ತು. ಈ ಬಿತ್ತುವಟ್ಟವನ್ನು ಕುರಿತು ಗೋಪಾಲ ಬಿ.ಆರ್. ಅವರು ವಿವರಿಸುತ್ತ ಕೆರೆಗೋಡೆಗೆ ಎಂಬುದು ಕೆರೆಯನ್ನು ಕಟ್ಟಿಸಿದವರಿಗೆ, ಅದರ ಕಟ್ಟೆ ಕಾಲುವೆಗಳನ್ನು ರಕ್ಷಿಸುತ್ತಿದ್ದವರಿಗೆ ಹಿಂದಿನ ಕಾಲದಲ್ಲಿ ನೀಡಲಾಗುತ್ತಿದ್ದ ಭೂಮಿದಾನ, ಇದಕ್ಕೆ 'ಬಿತ್ತುವಟ್ಟ' ಎಂಬ ಹೆಸರೂ ಇದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಆದರೆ ಮೇಲೆ ಉದಾಹರಿಸಿದ ಶಾಸನಗಳಿಂದ ಕೆರೆಯ ಸಂರಕ್ಷಣೆಯ ಉದ್ದೇಶದಿಂದ ಅದರ ವೆಚ್ಚವನ್ನು ಭರಿಸಲು ನೀಡಿದ ಭೂಮಿಯೆಂಬ ಅರ್ಥ ಬರುತ್ತದೆ.[18] ಅಲ್ಲದೇ ಕೃಷಿ ಉಪಯೋಗಕ್ಕೆಂದು ಕೆರೆಗಳ ನಿರ್ಮಾಣ ಮಾಡುವುದು ಅಂದಿನ ಧಾರ್ಮಿಕ ಕಾರ್ಯದಷ್ಟೇ ಮುಖ್ಯವೆಂಬಂತೆ ಅಂದಿನ ಹಲವು ಶಾಸನಗಳಲ್ಲಿ ಉಲ್ಲೇಖಿತವಾದ ಮಾಹಿತಿಗಳ ಮೂಲಕ ತಿಳಿದುಬರುತ್ತದೆ. ಸಾಮಾನ್ಯವಾಗಿ ಜಮೀನುದಾರರು, ಕೃಷಿಹಿಡುವಳಿದಾರರು ಕೆರೆಗಳ ನಿರ್ಮಾಣ ಮಾಡುವುದು ಶಿಲಾಶಾಸನಗಳ ಮೂಲಕ ಜನಸಾಮಾನ್ಯರಿಗೆ ತಿಳಿಸಿರುವ ಹಾಗೆ ಅದು ಸಮಾಜ ಕಾರ್ಯವಾಗಿರುವುದಿಲ್ಲ. ಅದರ ಹಿಂದೆ ಮಹಾ ಆರ್ಥಿಕ ಅಂಶಗಳು, ಲಾಭದಾಯಕ ವಿಚಾರಗಳು ಕೆಲಸ ಮಾಡುತ್ತಿದ್ದವು. ಇದರಿಂದಾಗಿ ಜನಸಾಮಾನ್ಯರ ಮೂಲಕ ತಮ್ಮ ಕೆಲಸಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಈ ಎಲ್ಲ ಕೆರೆಗಳ ನಿರ್ಮಾಣದ ಹಿಂದೆ ಜಮೀನುದಾರನ ಕುತ್ಸಿತ ಬುದ್ಧಿ ಕೆಲಸ ಮಾಡಿರುತ್ತಿತ್ತು. ಅದರಿಂದ ಸಮಾಜಕ್ಕೆ ಎಷ್ಟು ಲಾಭವಾಗುತ್ತಿತ್ತೋ ಇಲ್ಲವೋ ಆದರೀ ದೇವರು ಧರ್ಮದ ಹೆಸರಿನಲ್ಲಿ ತಮ್ಮ ಕೆಲಸಗಳನ್ನು ನೆರವೇರಿಸಿಕೊಳ್ಳುತ್ತಿದ್ದರು. ಧರ್ಮದ ಹೆಸರಿನಲ್ಲಿ ಅವರಿಗೆ ಲಾಭವೇ ಆಗುತ್ತಿತ್ತು. ಹೀಗಾಗಿ ತಾವು ಪಡೆದ ಲಾಭದಲ್ಲಿ ಅಲ್ಪಸ್ವಲ್ಪ ಧರ್ಮದ ಕಾರ್ಯಗಳಿಗೆ ವಿನಿಯೋಗಿಸುತ್ತಿದ್ದರು. ಇದರಿಂದ ಸಮಾಜದಲ್ಲಿ ಇನ್ನೂ ಭಿನ್ನ ಸ್ವರೂಪದ ಅಸಮಾನತೆಯ ವ್ಯವಸ್ಥೆಯೊಂದು ಸದ್ದಿಲ್ಲದೇ ನಿರ್ಮಾಣವಾಗುತ್ತಿತ್ತು.

ಕೆರೆ, ಕಾಲವೆಗಳನ್ನು ಮಹಿಳೆಯರೂ ಕಟ್ಟಿಸಿರುವ ಬಗ್ಗೆ ಅನೇಕ ಉಲ್ಲೇಖಗಳು ಸಿಗುತ್ತವೆ. ಶಾಂತಲೆ, ಮೇಚಲದೇವಿ ಮತ್ತು ಚಿಕ್ಕಬ್ಬೆ ಮುಂತಾದ ರಾಣಿಯರು[19] ಕೆರೆಕಟ್ಟೆಗಳನ್ನು ಕಟ್ಟಿಸಿದ್ದಾರೆ. ಮಧ್ಯಕಾಲದಲ್ಲಿ ಮಹಿಳೆಯರ ತಮ್ಮ ಹೆಸರಿನಲ್ಲಿ ಕೆರೆಗಳನ್ನು ಕಟ್ಟಿಸುವುದರ ಮೂಲಕ ಸಮಾಜದಲ್ಲಿ ಉಳಿದ ಶ್ರೀಮಂತ ಜನರನ್ನು ಈ ಹಂತದಲ್ಲಿ ಸೆಳೆಯುವ ತಂತ್ರ ಇದಾಗಿತ್ತು. ಈ ಮೇಲೆ ಚರ್ಚಿಸಿದಂತೆ ನೀರಾವರಿಗೆ ಬಳಕೆಯಾಗುವ ಕೆರೆ–ಬಾವಿಗಳನ್ನು ಧಾರ್ಮಿಕ ಹಿನ್ನೆಲೆಯಲ್ಲಿ ನೋಡಿರುವುದು ಕಂಡುಬರುತ್ತದೆ. ಕಾರಣ ಅನ್ಯರು ಇವುಗಳನ್ನು ಮನೆ ಉಪಯೋಗಕ್ಕೆ ಬಿಟ್ಟು ಬೇರೆ ಕಾರ್ಯಗಳಿಗೆ ಬಳಸಕೂಡದು ಎಂಬುದು ಇದರ ಆಶಯವಾಗಿರುವ ಸಾಧ್ಯತೆಯಿದೆ. ಕೆರೆ–ಬಾವಿಗಳನ್ನು ತೋಡಿಸುವುದು ಪುಣ್ಯಕಾರ್ಯಗಳಲ್ಲಿ ಒಂದೆಂದು ಭಾವಿಸಲಾಗಿತ್ತು. ಹೀಗಾಗಿ ಹೆಚ್ಚು ಹೆಚ್ಚು ಕೆರೆಗಳನ್ನು ಈ ಸಂದರ್ಭದಲ್ಲಿ ತೋಡಿಸಲಾಗುತ್ತಿತ್ತು. ಅಲ್ಲದೇ ಶೈವಧರ್ಮದ ಕಾಳಮುಖ ಪಂಥವು ರಾಜಾಶ್ರಯದ ತೆಕ್ಕೆಗೆ ಬಂದಾಗ ಶೈವಧರ್ಮಕ್ಕೆ ಸಂಬಂಧಿಸಿದಂತೆ ಶಿವದೇವಾಲಯಗಳನ್ನು ನಿರ್ಮಿಸಲು ವಣಿಕರು, ಜಮೀನುದಾರರಿಗೆ ಪುಸಲಾಯಿಸುತ್ತಿದ್ದರು. ಯಾರು ಶಿವದೇವಾಲಯಗಳನ್ನು ಕಟ್ಟಿಸುತ್ತಾರೋ ಅವರು ಅಜರಾಮರರಾಗುತ್ತಾರೆ ಎಂದು ಬಿಂಬಿಸಲಾಗುತ್ತಿತ್ತು. ಅವರ ಹೆಸರಿನಲ್ಲಿಯೇ ಶಿವಾಲಯಗಳನ್ನು ಕಟ್ಟಿಸಲು ಅವರಿಗೆ ಪ್ರೋತ್ಸಾಹಗಳನ್ನು ನೀಡುತ್ತಿದ್ದರು. ಆ ಕಾರಣಕ್ಕಾಗಿ ಮಾದಿಯಣ್ಣನೆಂಬುವನು ಶಿವಗೃಹವನ್ನು ಮಾಡಿಸಿ ಅನಂತರ ನೆಲವನ್ನು ಪಡೆದು ಬಾವಿಯನ್ನು ತೋಡಿಸಿದ ವಿಷಯವನ್ನು ಕ್ರಿಸ್ತಶಕ 1191ರ ಕುಂದಗೋಳ ಶಾಸನವು ಉಲ್ಲೇಖಿಸುತ್ತದೆ. '.... ದೇವಂ ನೆಲನಂ ಕುಡೆ ಪಡೆದು ಬಾವಿಯಂ ಬಿಡದಡುರ್ತು ತೋಡಿಸಿದನೆಮ್ಮೆಯರ ಮಾದಯ್ಯಂ ಅಮಿತಗುಣಂ ಪೂಜೆಯನೀಯೆ ಮಹೋತ್ಸವಚಿತ್ತ ವೃತ್ರತೊಲ್ಲೂರೊಡೆಯಪ್ರಮುಖಂ ಸಾಸಿರ್ವರ್ಸ್ಸಲೆ ನಮಸ್ಯಮಪ್ಪಂನ್ತ ಶೇಷಮಿದ್ರ್ದಾದರ..... ಬಾವಿಗಾ[20]. ಕ್ರಿಸ್ತಶಕ 1228ರ ಒಂದು ಶಾಸನದಲ್ಲಿ 'ಗುಯ್ಯಲು'[21] ಎನ್ನುವ ಒಂದು ಜಲಾಶಯವನ್ನು ಉಲ್ಲೇಖಿಸುತ್ತದೆ. ಡಿ.ಎಲ್.ಎನ್. ಅವರು ಈ ಶಾಸನಗಳಲ್ಲಿ ಉಲ್ಲೇಖವಾಗಿರುವ ಗುಯ್ಯಲು ಒಂದು ರೀತಿಯ ಜಲಾಶಯವೆಂದೂ, ಅದು ಕುಕ್ಕೆ ಮತ್ತು ಗೋಡೆಗಳಲ್ಲಿ ತುಂಬಿ ನೀರು ಹಾಯಿಸಲು ಅನುಕೂಲವಾಗುವ ನೀರಿನ ಹರಿವು ಎಂದು ಅರ್ಥೈಸಿದ್ದಾರೆ[22].

ನವನಿರ್ಮಾಣಗೊಂಡ ಹಳ್ಳಿಗಳಲ್ಲಿ ಸಾಮಾನ್ಯ ಶ್ರಮಿಕ, ರೈತವರ್ಗಕ್ಕೆ ಸೇರುವುದನ್ನು ತಪ್ಪಿಸಿ ಊರ ಮಹಾಜನರು(ಶ್ರೀಮಂತ ವರ್ಗ) ಸೇರಿದಂತೆ ಆ ಗ್ರಾಮಗಳಿಗೆ ಅಭಿವೃದ್ಧಿ, ಸಹಾಯ–ಸಹಕಾರದ ನೆಪದಲ್ಲಿ ಅಧಿಕಾರಿಗಳನ್ನು ನೇಮಿಸಿ ತಮ್ಮ ಹಿಡಿತಕ್ಕೆ ಇಟ್ಟುಕೊಳ್ಳುವ ಪ್ರಯತ್ನವನ್ನು ಸೂಕ್ಷ್ಮವಾಗಿ ಮಾಡುತ್ತಿದ್ದರು. ಈ ಹಿನ್ನೆಲೆಯಲ್ಲಿ ನೇರವಾಗಿ ಆ ಹಳ್ಳಿ ಅಥವಾ ಗ್ರಾಮಗಳ ಹಿಡಿತ ಭೂಮಾಲೀಕರ(ಮಹಾಜನರು) ಕೈವಶವಾಗುವಂತಹ ನಿಯಮಾವಳಿ

ಅಲಿಖಿತವಾಗಿ ರೂಪುಗೊಳ್ಳುತ್ತಿದ್ದವು. ಈ ಎಲ್ಲದರ ಕಾರಣದಿಂದಾಗಿ ಕೃಷಿಯಿಂದಾದ ಬದಲಾವಣೆಯು ರಾಜಪ್ರಭುತ್ವಕ್ಕೆ ಹಾಗೂ ಭೂಮಾಲೀಕರಿಗೆ ಹೆಚ್ಚು ಲಾಭವನ್ನುಂಟು ಮಾಡಿತೆಂದು ಹೇಳಬಹುದು. ಈ ಬೆಳವಣಿಗೆಗಳು ಕ್ರಿಸ್ತಶಕ 11ರಿಂದ 13ನೆಯ ಶತಮಾನಗಳ ಅವಧಿಯಲ್ಲಿ ಹೆಚ್ಚಾಗಿ ಕಂಡು ಬರುತ್ತವೆ[23]. ಈ ರೀತಿಯ ಸಾಮಾಜಿಕ ಅಂತಸ್ತುಗಳ ಮೂಲಕ ಇಡೀ ವ್ಯವಸ್ಥೆಯನ್ನು ಹೇಗೆ ತಮ್ಮ ಹಿಡಿತದಲ್ಲಿರಿಸಿಕೊಳ್ಳಲು ಪ್ರಯತ್ನಿಸಿದ್ದರು ಎಂಬುದು ಅಂದಿನ ಶಾಸನಗಳಲ್ಲಿನ ಉಲ್ಲೇಖಗಳು ಮಹತ್ವದ ಮಾಹಿತಿಯನ್ನು ಹೊರಹಾಕುತ್ತವೆ. ಕ್ರಿಸ್ತಶಕ 1159ರ ಬಾಗೇವಾಡಿಯ ಒಂದು ಶಾಸನವು ದೇವಾಲಯಗಳಿಗೆ ಹೊಂದಿಕೊಂಡಂತೆ ಹೂತೋಟಗಳನ್ನು ಬೆಳೆಸಿ ದೇವರ ಮತ್ತು ಮೇಲ್ವರ್ಗಕ್ಕೆ ಮಾಡುತ್ತಿದ್ದ ಸೇವೆಯನ್ನು ಕುರಿತಂತೆ ತಿಳಿಸುತ್ತದೆ. ತೋಟಗಳನ್ನು ಕೆಲವು ಸಾರಿ ಗುತ್ತಿಗೆಯ ಮೂಲಕ ಬೆಳೆಯಲು ನೀಡಲಾಗುತ್ತಿದ್ದು, '.... ಶ್ರೀರಾಮೇಶ್ವರದೇವರ ಮಾಂನ್ಯದ ಅಯ್ದು ಮತ್ತರಿಂ ಪತ್ತಿರೆ ಬಡಲಗಲು ಅಸುವೊಳೆಇಂ ಪತ್ತಿರೆತಂಕಲು 5 ಮತ್ತರ್ಕೆಯ್ಯ್ಸರ್ವನಮಸ್ಯವಾಗಿ ನಾಗ್ಮೆಯಂಗಳು ಧಾರಾಪೂರ್ವಕಂ ಮಾಡಿ ಕೊಟ್ಟರು॥ ಈ ದೇವರ ತೋಂಟದ ಅರಣಿಗುತ್ತಿಗ ಬೀಚಣನು ತನ್ನ ಮಕ್ಕಳುದೆಪ್ಪದೆ ದೇವರ್ಗ್ಗೆ ದಿವಸವಳವಿಕ್ಕುವ ಹೂವಿನ ಸರ 12 ಒಪ್ಪಿಡಿಯರಳು ಸೇವೆಯ ಬಾಡು। ಬ್ಯಂಜನಕ್ಕೆ ವರ್ಷಂಪ್ರತಿ ಫಲವಾದ ಹುಣಿಸೆಯ ಮರನೊಂದೆಱ ಹಣ್ಣಂ ಕುಡುವನುವರ್ಷಂಪ್ರತಿ ದೀಪಾಳಿಗೆ ದೇವರ್ಗ್ಗಿಕುವ ಗದ್ಯಾಣ 1 ಇಂತಿನಿತುಮಂ ನಡಸಿ ತೋಂಟವ ವಿಮಲಮರಮ ಮಾಡಿ ಇಲ್ಲಿಯ ಬ್ರಾಹ್ಮಣರಘಾದಿಯ ಮನೆಯನು ದೇವರು ಪರ್ವ್ವದೊಟಮು....'[24] ಅಲ್ಲದೇ, ಚನ್ನರಾಯಪಟ್ಟಣದ ಒಂದು ಶಾಸನದಲ್ಲಿ ದೇವಾಲಯಗಳು ಹೇಗೆ ನಿಶ್ಚಿತ ಧನವನ್ನು ನೀಡಿ ಮಾಲೆಗಾರರನ್ನು ನೇಮಿಸಿಕೊಳ್ಳುತ್ತಿದ್ದವು[25] ಎಂಬುದರ ಬಗ್ಗೆ ಉಲ್ಲೇಖಗಳು ಬರುತ್ತವೆ. ಈ ಎಲ್ಲ ಚಟುವಟಿಕೆಗಳು ಧಾರ್ಮಿಕ ವ್ಯವಸ್ಥೆಯ ಅಡಿಯಲ್ಲಿಯೇ ಜರುಗುತ್ತಿದ್ದವು.

ಜನರು ವ್ಯವಸಾಯ, ತೋಟಗಾರಿಕೆಯಲ್ಲದೆ ಜೊತೆಗೆ ವಿವಿಧ ವೃತ್ತಿಗಳನ್ನು ಅನುಸರಿಸುತ್ತಿದ್ದರು. ಸಾಮಾನ್ಯವಾಗಿ ಮಧ್ಯಕಾಲೀನ ಕರ್ನಾಟಕದಲ್ಲಿ ಸಾಮಾಜಿಕ ಬದಲಾವಣೆಗೆ ಅಥವಾ ಸ್ಥಿತ್ಯಂತರಕ್ಕೆ ಕೈಗಾರಿಕೆಗಳು ಮತ್ತು ಅವುಗಳಲ್ಲಿ ತೊಡಗಿಕೊಂಡಿದ್ದ ಕುಶಲಕರ್ಮಿಗಳು ಹೆಚ್ಚಿನ ಮಟ್ಟಿಗೆ ಕಾರಣವಾಗಿ ಕಂಡುಬರುತ್ತಾರೆ. ಈ ಕಾಲಘಟ್ಟದಲ್ಲಿ ಬಹುಸಂಖ್ಯೆಯ ಉದ್ದಿಮೆಗಳು ಕೃಷಿ ಆಧಾರಿತವಾಗಿದ್ದವು. ಎಣ್ಣೆ ತಯಾರಿಕೆ, ಬೆಲ್ಲ ಮತ್ತು ಸಕ್ಕರೆ ಉತ್ಪಾದನೆ, ಬಟ್ಟೆಗಳ ನೇಯ್ಗೆ ಮುಂತಾದವು ಕೃಷಿಕೇಂದ್ರಿತವಾಗಿದ್ದವು. ಇವುಗಳಲ್ಲದೆ ಮರದ ಕೆಲಸ, ಮಡಕೆ ತಯಾರಿಕೆ, ಆಭರಣಗಳ ತಯಾರಿಕೆ, ಗಣಿಗಾರಿಕೆ, ಯುದ್ಧೋಪಕರಣಗಳ ತಯಾರಿಕೆ, ಮನೆಬಳಕೆ ಸಾಮಗ್ರಿಗಳ ತಯಾರಿಕೆ ಮುಂತಾದ ಕೈಗಾರಿಕೆಗಳು ಉತ್ಪಾದನೆಯಲ್ಲಿ ತೊಡಗಿದ್ದವು. ಎಣ್ಣೆಯ ಉತ್ಪಾದನೆ ಅಂದಿನ ಪ್ರಮುಖ ಉದ್ದಿಮೆಯಾಗಿತ್ತು. ಎಣ್ಣೆ ಉತ್ಪಾದಿಸುವವರನ್ನು ತೈಲಿಕ, ತೆಲ್ಲಿಗಾರ, ಗಾಣಿಗ ಎಂಬ ಹೆಸರುಗಳಿಂದ ಕರೆಯಲಾಗುತ್ತಿತ್ತು.[26] ಈ ಎಣ್ಣೆ ಉತ್ಪಾದಕರನ್ನು ಕುರಿತಂತೆ ಮೂರು ರೀತಿಯ ಗಾಣಗಳು ಶಾಸನಗಳಲ್ಲಿ ಉಲ್ಲೇಖಿತವಾಗಿವೆ; ಎತ್ತುಗಾಣ,[27] ಕೈಗಾಣ[28] ಮತ್ತು ಮಟ್ಟುಗಾಣ[29]ಗಳಿಗೆ ಸಂಬಂಧಿಸಿದಂತೆ ವಿವರಿಸುತ್ತವೆ. ಈ ಗಾಣಗಳ ಮೇಲೆ ವಿಧಿಸುತ್ತಿದ್ದ ಸುಂಕವನ್ನು ಗಾಣದೆರೆ,[30] ಗಾಣಾಯ, ಗಾಣದ ಸುಂಕ ಮಂತಾದ ಹೆಸರುಗಳಿಂದ ಕರೆಯುತ್ತಿದ್ದರು.[31] ಸಾಮಾನ್ಯವಾಗಿ ಈ ಗಾಣಿಗರು ವಾಸಿಸುವ ಅಥವಾ ತಮ್ಮ ಉತ್ಪನ್ನಗಳನ್ನು ಮಾರುವ ಕೇರಿಗಳನ್ನು 'ಕಿಱಿಯ ತಲ್ಲಿಗೇರಿ', ಹಿರಿಯ ತೆಲ್ಲಿಗಗೇರಿ ಎಂಬುದರ ಮೇಲೆ ಬೇಲೂರು ಶಾಸನ ಬೆಳಕು ಚೆಲ್ಲುತ್ತದೆ.

ಈ ತೆಲ್ಲಿಗರ ಶಾಸನಗಳನ್ನು ಗಮನಿಸಿದರೆ, ಮಧ್ಯಕಾಲದಲ್ಲಿ ಎಣ್ಣೆಯ ಉತ್ಪಾದನೆ ಅತ್ಯಂತ ವ್ಯಾಪಕವಾಗಿತ್ತು ಎಂದು ತಿಳಿದುಬರುತ್ತದೆ. ಈ ಎಣ್ಣೆಯ ಉತ್ಪಾದಕರು ಎಲ್ಲ ರೀತಿಯ ವ್ಯವಹಾರಗಳ ಮೂಲಕ ಸಮಾಜದಲ್ಲಿ ಒಂದು ಪ್ರತಿಷ್ಠಿತ ಸಮುದಾಯವಾಗಿ ಗುರುತಿಸಿಕೊಂಡು ವ್ಯವಸ್ಥೆಯನ್ನು ಹಿಡಿತದಲ್ಲಿಟ್ಟುಕೊಂಡಿರುವುದು ಉಲ್ಲೇಖಿತ ಶಾಸನಗಳಿಂದ ತಿಳೀದುಬರುತ್ತದೆ. ತೆಲ್ಲಿಗರ ಅಯ್ವತ್ತೊಕ್ಕಲು,[32] ತಲಿಗ ಕೊತ್ತಳಿ,[33] ಗಾಣಿಗರೊಕ್ಕಲು, ತೆಲ್ಲಿಗರ ಕೊತ್ತಳಿ[34] ಇವರು ಗಾಣಗಳಲ್ಲಿ ಎಣ್ಣೆಯನ್ನು ತೆಗೆದು ಅದನ್ನು ಮಾರಾಟ ಮಾಡುತ್ತಿದ್ದರು. ಬಾಗೇವಾಡಿ ಶಾಸನದಲ್ಲಿ ಇವರು ವ್ಯಾಪಾರಿಕರು ಎಂದೇ ಸೂಚಿಸುತ್ತದೆ. ದೇವಾಲಯಗಳಿಗೆ ದಾನವಾಗಿ ಗಾಣಗಳನ್ನೇ ದಾನ ನೀಡುತ್ತಿದ್ದರು. ಅದರಿಂದ ತೆಗೆದ ಎಣ್ಣೆಯನ್ನು ನಂದಾದೀವಿಗೆಗೆ ಉಪಯೋಗಿಸಬೇಕೆಂಬುದು ಅವರ ಉದ್ದೇಶವಾಗಿರುತ್ತಿತ್ತು. ಅಲ್ಲದೇ ದೇವಾಲಯದ ಆವರಣದಲ್ಲಿಯೇ ಗಾಣವನ್ನು ಹಾಕಿಸಿರುವುದು ವ್ಯಾಪಾರದ ಉದ್ದೇಶದಿಂದ.[35] ಈ ಎಲ್ಲವೂ ತಮ್ಮ ಎಣ್ಣೆ ವ್ಯಾಪಾರವನ್ನು ವೃದ್ಧಿಸಿಕೊಳ್ಳುವುದರ ಸಲುವಾಗಿ ಸಹಜವಾಗಿ ಆಧುನಿಕ ಜಾಹಿರಾತು ಶೈಲಿಯಲ್ಲಿ ಅಂದು ತಮ್ಮ ಉತ್ಪಾದಿತ ಹಾಗೂ ಮಾರಾಟದ ವಸ್ತುಗಳ ಪ್ರಚಾರಕಾರ್ಯವನ್ನು ಸಾಮಾನ್ಯವಾಗಿ ಎಲ್ಲ ವ್ಯಾಪಾರಸ್ಥರು ಮಾಡುತ್ತಿದ್ದರು.

> ಎಲ್ಲಾ ಧರ್ಮಗಳುಮಂ ತೆಲ್ಲಿಗರಾರಯ್ವರವರವೊಲು ಮತ್ತೋರ್ವರು
> ಬಲ್ಲರೆ ಪುಣ್ಯಮನಾರ್ಜಿಪಲೆಲ್ಲಾ ನಾಡೊಳಗೆ ಅವರ ಧರ್ಮಮೆ ಧರ್ಮಂ[36]

ಕಾರಣ ಅವರಲ್ಲಿ ಎಲ್ಲ ಧರ್ಮದ ಜನರನ್ನು ಖರೀದಿಗೆ ಸೆಳೆಯುವ ಪ್ರಯತ್ನದ ಸಲುವಾಗಿ ಎಲ್ಲ ಧರ್ಮದ ದೇವಾಲಯಗಳ ನಂದಾದೀಪಕ್ಕೆ ಎಣ್ಣೆಯನ್ನು ನೀಡುತ್ತಿದ್ದರು ಎಂಬುದು ವ್ಯಾಪಾರಿ ಗುಣವಾಗಿತ್ತು. ಜೊತೆಗೆ ಧಾರ್ಮಿಕವಾಗಿರುವ ನಂಬಿಕೆಗಳನ್ನು ಸಮಾಜದಲ್ಲಿ ಬೆಳೆಸುವುದರ ಮೂಲಕ ತಮ್ಮ ಸ್ಥಾನವನ್ನು ಭದ್ರಪಡಿಸಿಕೊಳ್ಳುತ್ತಿದ್ದರು. ಅದರೊಂದಿಗೆ ಸಮಾಜವನ್ನು ಆರ್ಥಿಕವಾಗಿ ತಮ್ಮ ಹಿಡಿತಕ್ಕೆ ತಗೆದುಕೊಳ್ಳುವ ಹುನ್ನಾರ ಕೂಡ ಇರುತ್ತಿತ್ತು. ನಾಸಿಕದ ಒಂದು ಶಾಸನದಲ್ಲಿ ಹೇಳುವಂತೆ ಎಣ್ಣೆಯವರ ಸಂಘ ಅಸ್ತಿತ್ವದಲ್ಲಿದ್ದುದು, ಆ ಸಂಘವು ರೋಗಿಗಳಿಗೆ ಸನ್ಯಾಸಿಗಳಿಗೆ ವಸತಿಗೋಸ್ಕರ ವ್ಯವಸ್ಥೆಯನ್ನು ತಮ್ಮ ದಾನದ ರೂಪದಲ್ಲಿ ವ್ಯಯ ಮಾಡುತ್ತಿದ್ದರು.[37] ಹಾಗೆಯೇ ವ್ಯಾಪಾರಸ್ಥರು ದೇವಾಲಯಗಳನ್ನು ನಿರ್ಮಿಸಿರುವುದರ ಬಗ್ಗೆ ಶಾಸನಗಳು ಬೆಳಕು ಚೆಲ್ಲುತ್ತವೆ. ಕ್ರಿಸ್ತಶಕ 1093ರ ಬಂಕಾಪುರದ ಶಾಸನವೊಂದರಲ್ಲಿ ಕ್ರಿಸ್ತಶಕ 1029ರ ಕಾಲಘಟ್ಟದಲ್ಲಿ ಒಂದನೆಯ ಸೋಮೇಶ್ವರನ ಆಳ್ವಿಕೆಯ ಸಂದರ್ಭದಲ್ಲಿ, ಈ ಭಾಗದ ವ್ಯಾಪಾರಸ್ಥರು ಸೇರಿ ಬಂಕಾಪುರದ ನಗರೇಶ್ವರ ದೇವಾಲಯವನ್ನು ನಿರ್ಮಿಸಿದರು.[38] ಕ್ರಿಸ್ತಶಕ 1123ರ ಕಾಲದಲ್ಲಿದ್ದ ಬೊಮ್ಮಿಶೆಟ್ಟಿ ಎಂಬುವನು ಅರಟಾಳದಲ್ಲಿ ಪಾರ್ಶ್ವನಾಥ ಬಸದಿಯೊಂದನ್ನು ನಿರ್ಮಿಸಿರುವನು. ಕ್ರಿಸ್ತಶಕ 1138ರಲ್ಲಿ 3ನೆಯ ಸೋಮೇಶ್ವರನ ಆಳ್ವಿಕೆಯಲ್ಲಿ ಉದ್ದರ ಹೋಮಿಸೆಟ್ಟಿಯಿಂದ ಹೋಬೇಶ್ವರ ದೇವಾಲಯಕ್ಕೆ ದಾನವಾಗಿ ಅರವತ್ತು ಒಕ್ಕಲು ಬಿಟ್ಟ ಬಗೆಗೆ ತಿಳಿದುಬರುತ್ತದೆ.[39]

ಈ ದೇವಾಲಯಗಳಿಗೆ ಪೂರ್ವಕಾಲದಿಂದಲೇ ಎಣ್ಣೆ ಗಾಣದ ಸಂಘಗಳು ಅಥವಾ ವ್ಯಾಪಾರಸ್ಥರು ಧಾರ್ಮಿಕ, ಸಾಮಾಜಿಕ ಕಾರ್ಯಗಳನ್ನು ಮಾಡುತ್ತಿರುವುದರ ಹಿನ್ನೆಲೆಯ ಉದ್ದೇಶವು ಸ್ಪಷ್ಟವಾಗಿ ಗೋಚರಿಸುತ್ತದೆ. ನಾವು ಇಂದು ಏನು ಸಾಮಾಜಿಕ ಕಾರ್ಯಗಳೆಂದು ತಿಳಿಯುತ್ತೇವೆಯೋ ಅವೆಲ್ಲವೂ ವ್ಯಾಪಾರದ ಹಿನ್ನೆಲೆಯಲ್ಲಿಯೇ ಯೋಚಿಸಿದ ಯೋಜನೆಗಳಾಗಿ ಕಂಡುಬರುತ್ತವೆ.

ಬೆಲ್ಲ, ಸಕ್ಕರೆಗಳ ಮೇಲಿನ ತೆರೆಗೆಯನ್ನು ಆಲೆದರೆ ಎಂದು ಕರೆಯುತ್ತಿದ್ದರು. ಈ ಬೆಲ್ಲ ಸಕ್ಕರೆ(ಸಕ್ಕರೆ)ಗಳು ಮಾರಾಟದ ವಸ್ತುಗಳಾಗಿ ಶಾಸನಗಳಲ್ಲಿ ಉಲ್ಲೇಖಗೊಳ್ಳುತ್ತವೆ.[40] ಆದರೆ ಬೆಲ್ಲ, ಸಕ್ಕರೆ ತಯಾರಿಕೆಯ ಬಗ್ಗೆ ಹೆಚ್ಚಿನ ಮಾಹಿತಿ ಲಭ್ಯವಾಗಿಲ್ಲ. ಉತ್ಪನ್ನ ಮೂಲದ ವೃತ್ತಿಗಳಲ್ಲಿ ನೇಯ್ಗೆಯನ್ನು ಪ್ರಮುಖವಾಗಿ ಗಮನಿಸಬಹುದು. ನೇಯ್ಗೆ ಆ ಕಾಲದ ಬಹುದೊಡ್ಡ ಕೈಗಾರಿಕೆಗಳಲ್ಲಿ ಒಂದು ವೃತ್ತಿಯಾಗಿತ್ತು. ಈ ಕುರಿತಂತೆ ಕ್ರಿಸ್ತಶಕ 1276ರ ತಿ.ನರಸೀಪುರ[41] ಹಾಗೂ ಕ್ರಿಸ್ತಶಕ 1147ರ ಅಥಣಿಯ[42] ಶಾಸನಗಳಲ್ಲಿ 'ಸೀರೆ'ಗಳ ಬಗೆಗೆ ಉಲ್ಲೇಖ ಕಂಡುಬರುತ್ತವೆ. ಬಹುಶಃ ಇದು ಹತ್ತಿಯ ಬಟ್ಟೆಗಳನ್ನು ಕುರಿತು ವಿವರಿಸುತ್ತದೆ. ಅನೇಕ ಶಾಸನಗಳಲ್ಲಿ ಪಟ್ಟೆ, ಪಟ್ಟಾವಳಿಗಳ ಬಗ್ಗೆ ತಿಳಿಸುತ್ತವೆ. ಅವು ಬೆಲೆಬಾಳುವ ರೇಶ್ಮೆ ವಸ್ತ್ರಗಳಾಗಿದ್ದು ಶ್ರೀಮಂತರಿಗೆ ಮತ್ತು ದೇವರಿಗೆ ನೀಡುವ ವಸ್ತ್ರಗಳಾಗಿವೆ.[43] ರೇಶಿಮೆ ಬಟ್ಟೆಗಳನ್ನು ನೇಯುವವರಿಗೆ ಪಟ್ಟೆಗಾರರೆಂದು ಕರೆಯುತ್ತಿದ್ದರು. 12ನೆಯ ಶತಮಾನದಲ್ಲಿನ ಖಾನಾಪುರ[44]ದ ಒಂದು ಶಾಸನದಲ್ಲಿ 'ಪತ್ತಾವಳಿ'(=ಪಟ್ಟಾವಳಿ) ಎಂದು ಉಕ್ತಗೊಂಡಿದೆ. ಅದು ನೇಯ್ದ ವಸ್ತ್ರಗಳನ್ನು ಸೂಚಿಸುತ್ತದೆ. ಅನೇಕ ಕಾವ್ಯಗಳೂ ರೇಶ್ಮೆ ವಸ್ತ್ರವನ್ನು ಉಲ್ಲೇಖಿಸುತ್ತವೆ[45]. ಈ ಎಲ್ಲವನ್ನು ಗಮನಿಸಿದರೆ, ಬಟ್ಟೆಗಳನ್ನು ನೇಯುವ ಕಾರ್ಖಾನೆಗಳ ಉಲ್ಲೇಖಗಳನ್ನು ಅನೇಕ ಶಾಸನಗಳು ನೀಡುತ್ತವೆ. ಬಟ್ಟೆಗಳನ್ನು ತಯಾರಿಸಲು ಬೇಕಾದ ಕಚ್ಚಾವಸ್ತುಗಳನ್ನು ಉತ್ಪಾದಿಸುವ, ನೇಯುವ ಮಾರಾಟ ಮಾಡುವ ಕೆಲಸ ಒಂದು ಬೃಹತ್ ಉದ್ದಿಮೆಯಂತೆಯೇ ಇತ್ತು. ಬಟ್ಟೆ ನೇಯುವ ಕಾರ್ಖಾನೆಗೆ ಅರಸರ ಮತ್ತು ಅಧಿಕಾರಿ ವರ್ಗಗಳ ಪ್ರೋತ್ಸಾಹವೂ ದೊರಕುತ್ತಿತ್ತು. ನೇಕಾರರ ಮೇಲೆ ವಿಧಿಸುತ್ತಿದ್ದ ತೆರಿಗೆಯನ್ನು ನೂಲುದೆರೆ,[46] ಮಗ್ಗದೆರೆ, ಮಗ್ಗ ಸುಂಕ[47] ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ದಿನನಿತ್ಯದ ಬಳಕೆಗೆ ಬೇಕಾದ ಮಣ್ಣಿನ ಮಡಕೆಗಳನ್ನು ತಯಾರಿಸುವವರನ್ನು ಕುಂಬಾರರು ಎನ್ನುವ ಹೆಸರಿನಿಂದ ಕರೆಯಲಾಗುತ್ತಿತ್ತು. ಗ್ರಾಮೀಣ ಆರ್ಥಿಕತೆಯಲ್ಲಿ ಕುಂಬಾರರು ಪ್ರಮುಖ ಪಾತ್ರವನ್ನು ವಹಿಸುತ್ತಿದ್ದರು. ಕುಂಬಾರರು ಮಡಕೆ ತಯಾರಿಕೆಗೆ ಬಳಸುತ್ತಿದ್ದ ಚಕ್ರ, ಮಣ್ಣು ಮುಂತಾದ ವಿಚಾರಗಳ ಕುರಿತು ಶಾಸನಗಳು ವಿವರವಾಗಿ ತಿಳಿಸುತ್ತವೆ. ಕುಂಬಾರರ ತೆರಿಗೆಯನ್ನು ಕುಂಬಾರದೆಱ[48] ಎಂದು ಹೆಸರಿಸಲಾಗಿದೆ.[49] ಈ ರೀತಿ ಮಧ್ಯಕಾಲದಲ್ಲಿ ಕಂಡುಬರುವ ವೃತ್ತಿಗಳು ಆರ್ಥಿಕ ವ್ಯವಸ್ಥೆಯ ಮೂಲವಾಗಿವೆ. ಕೃಷಿಕೇಂದ್ರಿತ ವೃತ್ತಿಗಳು ಹೇಗೆ ಸಮಾಜದಲ್ಲಿ ಆರ್ಥಿಕವಾದ ಸಬಲತೆಯನ್ನು ಹೊಂದಿದ್ದವು ಅವುಗಳಿಂದ ಇಡೀ ಒಂದು ಸಾಮಾಜಿಕ ವ್ಯವಸ್ಥೆಯ ಮೇಲೆ ಪ್ರಭುತ್ವದ ಹಿಡಿತವನ್ನು ಹೊಂದಲು ಪ್ರಯತ್ನಿಸುತ್ತಿದ್ದರು ಎಂಬುದು ಅವರ ಆರ್ಥಿಕ ಸಬಲತೆಯ ಮೇಲೆ ನಿರ್ಧರಿತವಾಗುತ್ತಿತ್ತು.

ಮಧ್ಯಕಾಲೀನ ಕರ್ನಾಟಕದಲ್ಲಿ ಇದುವರೆಗೂ ಗಮನಿಸಿದ ಉತ್ಪಾದಕರ ಜೊತೆಗೆ ಅನೇಕ ಬಗೆಯ ವರ್ತಕರು ಇದ್ದುದರ ಬಗೆಗೆ ಉಲ್ಲೇಖಗಳು ದೊರೆಯುತ್ತವೆ. ಹಲವು ಶಾಸನಗಳು ಮಹಿಳೆಯರು ವ್ಯಾಪಾರ ವಹಿವಾಟಿನಲ್ಲಿ ತೊಡಗಿರುವುದರ ಬಗ್ಗೆ ಬೆಳಕು ಚೆಲ್ಲುತ್ತವೆ. ವೆಣ್ಣಲೆ ಸೆಟ್ಟಿಕವ್ವೆ ಎಂಬುವಳು ದೇವಾಲಯವನ್ನು ಕಟ್ಟಿಸಿ ಶಿವನನ್ನು ಪ್ರತಿಷ್ಠೆಗೊಳಿಸಿದಳೆಂದು ಶಾಸನದಲ್ಲಿದೆ,

> ಖಳರಳವಂ ಕಳಲ್ವಿ ನೆಱೆ ಕಳ್ಳರ ಕೊಳಿಯ ಬಧೆಯಂ ಬಿಗ
> ಳ್ಳಳಱ ತೆರಳ್ಚಿ ತೂಳ್ದಿ ನೆರೆ ಮನ್ನೆಯರಂನನೆ ಯವಂ ನಿರಾಕುಳಂ
> ಳೆದು ಬಣಂಜು ಧರ್ಮ್ಮವನೆ ಪಾಳಿಸಿ ಭೀತರನೆಯ್ದೆ ಕಾದು ನಿ
> ಮ್ರ್ಮಳತರ ಕಿರ್ತ್ತಿಯಂ ಪಡೆದಳಾರ್ಪ್ಪಡಿ ವೆಣ್ಣಲ ಸೆಟ್ಟಿಕವ್ವೆಯೊಳ್
> ಧರೆಗೆಸೆವ ಬಣಂಜು ಸಮೆಯ ಪ್ರತಿಪಾಳನವರ್ತ್ತಿಯಿಂದೆ ದು
> ರ್ದ್ಧರತರಮಪ್ಪ ಚಂಡಿಕೆಯ ವೆಣ್ಣಲೆ ನಾರಿಯೆನಿಪ್ಪ ನಾಮಮಮ
> ಧರಿಯ್ಸಿ ಕೊಣವತ್ತಿರಗಧಿಪೋತ್ತಮೆಯಾಗಿಯೆ ವೈರಿ ಸಂ
> ಹರಣಮನೆಯ್ದೆ ಮಾಡಿದಳೆನುತ್ತಮೆ ಬಣ್ಣಿಸುಗು ಜಗಜ್ಜನಂ[52]

ಇಡೀ ವರ್ತಕರಲ್ಲೇ ವಿಶೇಷವಾಗಿ ಕಾಣುವ ಈ ವೀರಬಣಂಜುಧರ್ಮದ ಶಾಸನದಲ್ಲಿನ ಸೆಟ್ಟಿಕವ್ವೆಯು ಕೆರಸಿ, ಕಾವಲಿ, ತಂಬುಗೆ, ಹುಟ್ಟು, ಸಟ್ಟುಗ ಇತ್ಯಾದಿಗಳ ಮಾರಾಟದಿಂದ ಜೀವನವನ್ನು ಸಾಗಿಸುವ ಈಕೆ ಶಿವನನ್ನು ಪ್ರತಿಷ್ಠಾಪಿಸಿದಳೆಂಬುದನ್ನು ಗಮನಿಸಿದರೆ ಬಹುಶಃ ಎಲ್ಲವೂ ವ್ಯಾವಹಾರಿಕ ಮನೋಧರ್ಮದಲ್ಲಿಯೇ ನಡೆಯುತ್ತಿದ್ದವು ಎಂಬುದು ಗೊತ್ತಾಗುತ್ತದೆ. ಹೀಗೆ ಹಲವು ಹತ್ತು ಬಗೆಯಲ್ಲಿ ಆರ್ಥಿಕತೆಯು ಕ್ರೋಡೀಕರಣಗೊಳ್ಳುತ್ತಿತ್ತು. ಇದರಿಂದ ಒಂದು ರೀತಿಯಲ್ಲಿ ಸಾಮಾಜಿಕವಾಗಿ ಉತ್ಪಾದಕರು ಮತ್ತು ವರ್ತಕರು ತಮ್ಮ ಮೂಲಸ್ಥಾನಗಳಿಂದ ಮೇಲ್ಮಟ್ಟದಲ್ಲಿರುತ್ತಿದ್ದುದರ ಬಗೆಗೆ ಶಾಸನಗಳು ಬೆಳಕು ಚೆಲ್ಲುತ್ತವೆ.

ಸಾಮಾಜಿಕವಾಗಿ ಸಂಕೀರ್ಣಗೊಂಡ ಕಾಲಘಟ್ಟವಾದ 12ನೆಯ ಶತಮಾನದಲ್ಲಿ ಕರ್ನಾಟಕದಲ್ಲಿಯೇ ಬ್ರಾಹ್ಮಣ(ವೈದಿಕ)ರು ಧಾರ್ಮಿಕ ನಾಯಕರಾಗಿ ಗೌರವವನ್ನು ಹಾಗೂ ಆರ್ಥಿಕವಾಗಿ ಉನ್ನತವಾದ ಸ್ಥಿತಿಯನ್ನು ಒಟ್ಟೊಟ್ಟಿಗೆ ಪಡೆದುಕೊಳ್ಳುತ್ತಿದ್ದರು. ಹೀಗೆ ಈ ಅವಕಾಶಗಳನ್ನು ಪಡೆಯುತ್ತಿದ್ದವರಲ್ಲಿ ಅನೇಕರು ಭೂಮಾಲೀಕತ್ವವನ್ನು ಹೊಂದಿದ್ದರು. ಅಲ್ಲದೆ ತೆರಿಗೆ ವಿನಾಯಿತಿಯ ಸೌಲಭ್ಯ ಪಡೆದಿದ್ದರು. ಸಾಮಾನ್ಯವಾಗಿ ರಾಜಸತ್ತೆಯ ಬೆಂಬಲ ಇವರಿಗಿದ್ದಿತು. ಭೂಮಿಯಿಲ್ಲದ ಜನಸಾಮಾನ್ಯರು ಅನ್ಯ ಉದ್ಯೋಗಗಳನ್ನು ಹುಡುಕಿಕೊಳ್ಳುತ್ತಿದ್ದರು. ಈ ಸಂದರ್ಭದಲ್ಲಿ ವ್ಯಾಪಾರ ವಹಿವಾಟು ಈ ಕಾಲಘಟ್ಟದಲ್ಲಿ ತೀವ್ರವಾಗಿ ಏಳಿಗೆ ಹೊಂದಿತ್ತು. ವ್ಯಾಪಾರ–ವ್ಯವಹಾರದ ಪ್ರಗತಿಯು ಸಮಾಜದ ಆರ್ಥಿಕ ಚೌಕಟ್ಟನ್ನು ಬದಲಾಯಿಸಿತು. ಈ ಹಿನ್ನೆಲೆಯಲ್ಲಿ ಗ್ರಾಮೀಣ ಪ್ರದೇಶಗಳಲ್ಲಿ ಹನ್ನೆರಡನೆಯ ಶತಮಾನದ ವೇಳೆಗೆ ಕುಶಲಕರ್ಮಿಗಳು, ವಣಿಕರ ವರ್ಗಗಳು ಪ್ರಧಾನವಾಗಿ ಕಂಡುಬರುತ್ತವೆ. ಆರ್ಥಿಕತೆಯ ಮೂಲ ಕೃಷಿ ಪ್ರಧಾನವಾಗಿದ್ದು, ಈ ವೇಳೆಗೆ ವಾಣಿಜ್ಯ ವ್ಯವಹಾರವು ಮುಖ್ಯ ನೆಲೆಗೆ ಬಂದಿತ್ತು. ಈ ಅವಧಿಯಲ್ಲಿಯೇ ಕುಶಲ ಕೆಲಸಗಾರರ ಸಂಘಗಳು ಹೆಚ್ಚಾಗಿ ಕಂಡುಬರುತ್ತವೆ. ವ್ಯಾಪಾರದ ಬಿರುಸಿನಲ್ಲಿ ಆದ ಬೆಳವಣಿಗೆಯಿಂದಾಗಿ ಒಂದು ಸ್ಥಳದಿಂದ ಇನ್ನೊಂದು ಸ್ಥಳಕ್ಕೆ ವಲಸೆಗಾರರ ಸಂಖ್ಯೆಯು ಕೂಡ ಹೆಚ್ಚಾಯಿತು. ಈ ಹಿನ್ನೆಲೆಯಲ್ಲಿ ಕರ್ನಾಟಕದ ಉತ್ತರ ಭಾಗದಲ್ಲಿ ವ್ಯಾಪಾರದ ಕೇಂದ್ರಗಳು ಹೆಚ್ಚಾಗಿ ಬೆಳೆದುಬರಲು ಸಾಧ್ಯವಾಗಿದೆ. ಹಾಗೆಯೇ ವ್ಯಾಪಾರಸ್ಥರು ದೇವಾಲಯಗಳನ್ನು ನಿರ್ಮಿಸಿರುವುದು ಕೂಡ ಹೆಚ್ಚಾಗಿ ಕಂಡುಬರುತ್ತವೆ.

ಸಾಮಾನ್ಯವಾಗಿ ವ್ಯಾಪಾರಗಳು ಸಂತೆಗಳ ರೂಪದಲ್ಲಿ ನಡೆಯುತ್ತಿದ್ದವು. ರಾಜ್ಯದ ವಿವಿಧ ಭಾಗಗಳಲ್ಲಿ ಸಂತೆಗಳು ಜರುಗುತ್ತಿದ್ದವು. ಅವುಗಳಲ್ಲಿ ಮಂಗಳವಾರ ಸಂತೆ, ಬುಧವಾರ ಸಂತೆ, ಶುಕ್ರವಾರ ಸಂತೆ, ಭಾನುವಾರ ಸಂತೆ ನಡೆಯುತ್ತಿದ್ದವು. ಸಂತೆಗಳಲ್ಲಿ ಮಾತ್ರವಲ್ಲದೆ, ಅಂಗಡಿಗಳನ್ನು ಪ್ರಮುಖ ಕೇಂದ್ರಗಳನ್ನಾಗಿಸಿಕೊಂಡು ವ್ಯಾಪಾರಗಳು ನಡೆಯುತ್ತಿದ್ದವು.

ಕೆಲವೊಂದು ಕಡೆಗಳಲ್ಲಿ ಅಂಗಡಿಗಳನ್ನು ಕಟ್ಟಿಸಿ ಅವುಗಳನ್ನು ಜಿನಾಲಯ ಅಥವಾ ದೇವಾಲಯಗಳಿಗೆ ದಾನವಾಗಿ ನೀಡಿದರೆ ಪುಣ್ಯ ಪ್ರಾಪ್ತಿಯಾಗುತ್ತದೆ ಎನ್ನುವ ಧಾರ್ಮಿಕ ನಂಬಿಕೆಯನ್ನು ವರ್ತಕರ ಹಾಗೂ ಅಧಿಕಾರಿಗಳ ಮೇಲೆ ಹೇರಲಾಗುತ್ತಿತ್ತು. ವರ್ತಕರ ಅಂಗಡಿಗಳನ್ನು ಮತ್ತು ವ್ಯಾಪಾರದ ರೀತಿ–ನೀತಿಗಳನ್ನು ಪಾಲಿಸುವಂತೆ ಮಾಡಲು ಹಾಗೂ ಬೆಲೆಯನ್ನು ನಿಗದಿಪಡಿಸಲು ಅಧಿಕಾರಿಗಳು ಇರುತ್ತಿದ್ದರು. ಈ ಎಲ್ಲ ಚಟುವಟಿಕೆಗಳು ರಾಜಪ್ರಭುತ್ವ ಮತ್ತು ಧರ್ಮಪ್ರಭುತ್ವದ ಅಡಿಯಲ್ಲಿಯೇ ಇರುತ್ತಿದ್ದವು. ಕ್ರಿಸ್ತಶಕ 1204ರ ಮಂಗಳೂರಿನ ಒಂದು ಶಾಸನ ಈ ಅಧಿಕಾರಿಗಳನ್ನು 'ಅಂಗಡಿ ಅಧಿಕಾರಿ'ಗಳು ಎಂದು ಸಂಬೋಧಿಸುತ್ತದೆ.[52] ಅಲ್ಲದೇ ಎಲ್ಲ ಅಂಗಡಿ ಮುಗ್ಗಟ್ಟುಗಳಿಗೆ ತೆರಿಗೆ ಪಡೆಯಲಾಗುತ್ತಿತ್ತು. ಅದನ್ನು 'ಅಂಗಡಿದೆರೆ'[53] ಎಂದು ಕರೆಯುತ್ತಿದ್ದರು. ಸಾಮಾನ್ಯವಾಗಿ ಸಂತೆಗಳು, ವ್ಯಾಪಾರಗಳು ಪಟ್ಟಣ, ಮಂಡಲ ಮತ್ತು ನಾಡುಗಳಲ್ಲಿ ನಡೆಯುತ್ತಿದ್ದವು. ವ್ಯಾಪಾರವು ಅಧಿಕಾರಕೇಂದ್ರಿತವಾಗಿತ್ತು. ತೆರಿಗೆ ವಸೂಲಿ ಮಾಡಲು ಅಧಿಕಾರಿಗಳನ್ನು ಕೂಡ ನೇಮಿಸಲಾಗುತ್ತಿತ್ತು. ಈ ಅಧಿಕಾರಿಗಳು ಕೇವಲ ಅಧಿಕಾರ ಚಲಾಯಿಸುವವರಾಗಿರದೆ ವ್ಯಾಪಾರವನ್ನು ಕೂಡ ನಡೆಸುವವರಾಗಿದ್ದರು. ಇವರು ಅರಸ, ಪ್ರಜೆ ಮತ್ತು ವರ್ತಕರ ನಡುವಿನ ಬಹುಮುಖ್ಯವಾದ ಕೊಂಡಿಯಾಗಿದ್ದು, ಕೃಷಿಯೊಂದಿಗೆ ಕೃಷಿಯೇತರ ಚಟುವಟಿಕೆಗಳು ಚುರುಕುಗೊಳ್ಳುವಂತೆ ಮಾಡುತ್ತಿದ್ದರು. ಈ ಎಲ್ಲದರ ಹಿನ್ನೆಲೆಯಲ್ಲಿ ವಣಿಕ ವರ್ಗಗಳು ಉತ್ತಮಗೊಂಡು ಅವರ ಆರ್ಥಿಕ ಸ್ಥಿತಿಯು ಸುಧಾರಿಸಿದುದರಿಂದ ಸಾಮಾಜಿಕವಾಗಿ ಒಂದು ಮಧ್ಯಮವರ್ಗವೂ ಜೊತೆಯಾಗಿಯೇ ಅಸ್ತಿತ್ವಕ್ಕೆ ಬರುತ್ತಿತ್ತು.

ಆದಾಯ ತೆರಿಗೆಗಳು ಅಂದಿನ ಆಡಳಿತ ವ್ಯವಸ್ಥೆಯನ್ನು ಮುನ್ನಡೆಸಲು ಅವಶ್ಯಕ ಸಾಧನವಾಗಿತ್ತು. ಈ ರಾಜ್ಯಾದಾಯವು ಅನೇಕ ಮೂಲಗಳಿಂದ ಕ್ರೋಢೀಕರಣಗೊಳ್ಳುತ್ತಿತ್ತು, ರಾಜ್ಯಾದಾಯವು ತೆರಿಗೆಗಳ ಮೂಲಕವೇ ಸಂಗ್ರಹವಾಗುವ ಅಧಿಕ ಮೊತ್ತವಾಗಿತ್ತು. ಅದು ನೇರವಾಗಿ ರಾಜನಿಗೆ ಸಲ್ಲಿಕೆ ಆಗುತ್ತಿತ್ತು. ಭೂ ತೆರಿಗೆ, ಆಸ್ತಿ ತೆರಿಗೆ, ವೃತ್ತಿ ತೆರಿಗೆ, ವ್ಯಾಪಾರದೆರೆ, ಸ್ಥಳೀಯವಾಗಿ ಉತ್ಪಾದಿತವಾಗುವ ಉತ್ಪನ್ನಗಳ ಮೇಲಿನ ತೆರಿಗೆ, ಸಾಮಾಜಿಕ ತೆರಿಗೆಗಳು ಇಷ್ಟೇ ಅಲ್ಲದೆ ಕಾಣಿಕೆಗಳು, ದಂಡಗಳು ಹೀಗೆ ನಾನಾ ರೀತಿಯ ತೆರಿಗೆ, ಸುಂಕಗಳ ಮೂಲಕ ರಾಜ್ಯಾದಾಯವು ಕೂಡಿರುತ್ತಿತ್ತು. ವೈರಿ ರಾಜರನ್ನು ಸೋಲಿಸಿ ವಶಪಡಿಸಿಕೊಂಡ ಆದಾಯವು ರಾಜ್ಯದ ಬೊಕ್ಕಸಕ್ಕೆ ಸೇರುತ್ತಿತ್ತು. ಹೀಗೆ ರಾಜ್ಯದ ಬೊಕ್ಕಸವು ವಿಭಿನ್ನ ಮಾರ್ಗಗಳಲ್ಲಿ ಭರ್ತಿಯಾಗುತ್ತಿತ್ತು. ಸಾಮಾನ್ಯವಾಗಿ ಪ್ರಜೆಗಳಿಂದ ಸಂಗ್ರಹಿಸುತ್ತಿದ್ದ ತೆರಿಗೆಯು ಪ್ರಮುಖ ಆದಾಯವಾಗಿತ್ತು. ರಾಜನಿಗೆ ತೆರಿಗೆಗಳನ್ನು ನೀಡಬೇಕೆಂದು ಪ್ರಾಚೀನ ಸ್ಮೃತಿ, ಸಂಹಿತೆಗಳು ಹೇಳುತ್ತವೆ. ಭೂಮಿಯ ಉತ್ಪನ್ನದ ಮತ್ತು ಇತರ ಯಾವುದೇ ಆದಾಯದ ಆರನೆಯ ಒಂದು ಭಾಗದ ಉತ್ಪನ್ನ ತೆರಿಗೆಯ ರೂಪದಲ್ಲಿ ಸಂದಾಯ ಆಗಬೇಕೆಂದು ಸಂಗಮ್ ಕಾಲದ ಸಾಹಿತ್ಯದಲ್ಲಿ ನಿರೂಪಿತವಾಗಿದೆ.[53]

ಹೀಗೆ ಸಂದಾಯವಾಗುತ್ತಿದ್ದ ತೆರಿಗೆಗಳ ವಿಷಯ ಸರಳವಾಗಿದ್ದಂತಿಲ್ಲ. ಕಾಲದಿಂದ ಕಾಲಕ್ಕೆ, ಪ್ರದೇಶದಿಂದ ಪ್ರದೇಶಕ್ಕೆ ತೆರಿಗೆಗಳು ಭಿನ್ನವಾಗಿದ್ದವು. ಏಕರೂಪತೆಯಂತೂ ಇರಲೇ ಇಲ್ಲವೆನ್ನಬಹುದು. ಕರ್ನಾಟಕದ ಹಲವಾರು ಶಾಸನಗಳಲ್ಲಿ ಕಂಡುಬರುವ ನೂರಾರು ತೆರಿಗೆಗಳಿಗೆ, ಸುಂಕಗಳಿಗೆ, ರಾಜ್ಯಾದಾಯದ ಆಕರಗಳಿಗೆ ಸಂಬಂಧಿಸಿದ ಪದಗಳಿಗೆ ಅರ್ಥ ಹೇಳುವುದು ಅತ್ಯಂತ ಜಟಿಲ ಸಮಸ್ಯೆಯಾಗಿದೆ. ಮಧ್ಯಕಾಲಘಟ್ಟದಲ್ಲಿ ತೆರಿಗೆಯ ಸ್ವರೂಪದಲ್ಲಿ ಕಾಲದಿಂದ ಕಾಲಕ್ಕೆ ಕೊಟ್ಟ ತೆರಿಗೆಯ ರಿಯಾಯಿತಿಗಳು, ಹಾಕಿದ ಹೊಸ ತೆರಿಗೆಗಳು ಅದನ್ನು ಜಟಿಲಗೊಳಿಸಿವೆ. ರಾಜ್ಯದ ಖರ್ಚು, ವೆಚ್ಚ, ಅಭಿವೃದ್ಧಿ ಕಾರ್ಯಕ್ರಮಗಳು, ಹಾಕಿದ ಹೊಸ ತೆರಿಗೆಗಳು ಅಧಿಕವಾಗಿರುವುದಷ್ಟೇ ಅಲ್ಲದೇ ಅನಿವಾರ್ಯ ಕೂಡ ಆಗಿತ್ತು. ಹಳೆಯ ತೆರಿಗೆಗಳ ಜೊತೆ ಹಲವು ಹೊಸ ತೆರಿಗೆಗಳು ಬಂದವು. ಹೊಸ ಹೆಸರುಗಳು ಬಂದವು. ಗಂಗರ ಆಡಳಿತದ ಅವಧಿಯಲ್ಲಿದ್ದ ತೆರಿಗೆ ವ್ಯವಸ್ಥೆಯು ಪ್ರಾಚೀನ ಕಾಲದಿಂದ ಬಂದ ತೆರಿಗೆ ವ್ಯವಸ್ಥೆಯೇ ಆಗಿತ್ತು. ನಂತರ ಈ ತೆರಿಗೆ ವ್ಯವಸ್ಥೆಯು ಹೊಯ್ಸಳರ ಕಾಲದಲ್ಲಿ ತುಂಬ ಜಟಿಲವಾಯಿತು.[54]

ಅದೇನೇ ಇರಲಿ, ಸಮಾಜದ ವಸ್ತುನಿಷ್ಠ ನಿಯಮಗಳ ಆಧಾರದಲ್ಲಿ ವಿಭಿನ್ನ ವರ್ಗ–ಜಾತಿಗಳು, ಮಾನವ ಪೀಳಿಗೆಯು ತನ್ನ ಚಟುವಟಿಕೆಗಳಿಂದ ಸೃಷ್ಟಿಸುವ ಅಖಂಡ ಪರಂಪರೆಯ ದಾಖಲೆಯಾಗಿರುತ್ತದೆ. ಮಾನವನ ಬಹುರಂಜಿತ ಜೀವನ ವಿಧಾನದ ಅಧ್ಯಯನವೇ ಸಂಸ್ಕೃತಿಯಾಗುತ್ತದೆ. ಸಮಾಜಜೀವಿಯಾದ ಮಾನವನ ಅನೇಕ ಸಂಬಂಧಗಳಲ್ಲಿ ಉತ್ಪಾದನಾ ಸಂಬಂಧವೇ ಒಂದು ಸಮಾಜದ ತಳಹದಿಯಾಗಿರುತ್ತದೆ. ಈ ಸಂಬಂಧದ ಆಧಾರದಲ್ಲಿಯೇ ಇತರರೆಲ್ಲರ ಸಾಮಾಜಿಕ ಚಟುವಟಿಕೆಗಳು ನಿರ್ಧಾರವಾಗುತ್ತವೆ. ಹಾಗೆ ನೋಡಿದರೆ ಒಂದರ್ಥದಲ್ಲಿ ಮಾನವರ ವಿಭಿನ್ನ ಸಾಮಾಜಿಕ ಸಂಬಂಧಗಳ ಅಧ್ಯಯನವೇ ಇತಿಹಾಸವಾಗುತ್ತದೆ. ಉತ್ಪಾದನಾ ಸಂಬಂಧಗಳ ಕುರಿತು ಶಾಸನಗಳು ಕೊಡುವ ಮಾಹಿತಿ ಅಲ್ಪಪ್ರಮಾಣದ್ದು, ಆಕಸ್ಮಿಕವಾದದ್ದು. ಅಲ್ಲಿ ಏನೇ ಇದ್ದರೂ ಶೋಷಕವರ್ಗಗಳ ನಡುವೆ ನಡೆಯುತ್ತಿದ್ದ ವ್ಯವಹಾರ ಚತುಷ್ಟಯಕ್ಕೆ(ಆದಿ, ದಾನ, ಕ್ರಯ, ಪರಿವರ್ತನೆ) ಹೆಚ್ಚಿನ ಆದ್ಯತೆ. ಈ ನಾಲ್ಕು ವ್ಯವಹಾರಗಳಲ್ಲಿ ದಾನಕ್ಕೆ ಪ್ರಥಮ ಪ್ರಾಶಸ್ತ್ಯ ದೊರೆತಿರಲು ಕಾರಣಗಳು ಏನೆಂಬುದನ್ನು ನೋಡಬೇಕಾಗುತ್ತದೆ. ಉತ್ಪಾದನಾ ಸಂಬಂಧಗಳಲ್ಲಿ ಪ್ರಧಾನವಾಗುವುದು ಶೋಷಕರು ಮತ್ತು ಶೋಷಿತರ ಮಧ್ಯದ ಸಂಬಂಧವೇ ಹೊರತು, ಆಸ್ತಿಯುಳ್ಳ ಶೋಷಕರ ಮಧ್ಯವಲ್ಲ. ಆ ಕಾಲದಲ್ಲಿ ಶೋಷಕವರ್ಗಗಳಲ್ಲಿ ರಾಜಶಾಹಿ ಪ್ರಥಮಸ್ಥಾನದಲ್ಲಿತ್ತು. ಆಡಳಿತಶಾಹಿ ನಂತರದ ಸ್ಥಾನದಲ್ಲಿ ಅಗ್ರಹಾರ, ಮಠ, ದೇಗುಲ, ವ್ಯಾಪಾರಸ್ಥರು ತದನಂತರದ ಶೋಷಕವರ್ಗಗಳು. ಭೂಮಿಯಲ್ಲಿ ದುಡಿಯುವ ಮತ್ತು ಅವರಿಗೆ ಪೂರಕವಾದ ವೃತ್ತಿಗಳಲ್ಲಿ ನಿರತರಾದ ವಿವಿಧ ಜನವರ್ಗಗಳು ಶೋಷಿತವರ್ಗವಾಗಿತ್ತು. ರಾಜಶಾಹಿ ಮತ್ತು ಇತರ ಶೋಷಕವರ್ಗಗಳ ನಡುವೆ ಇದ್ದ ವೈರುಧ್ಯಗಳು ಶಾಸನಗಳಲ್ಲಿ ಅಲ್ಲಲ್ಲಿ ಕಂಡು ಬರುತ್ತವೆ. ಆದರೆ ಸಾಮಾಜಿಕ ಚಲನೆಗೆ ಈ ವೈರುಧ್ಯಗಳು ಪ್ರಧಾನವಾಗಲಾರವು. ಶೋಷಕ, ಶೋಷಿತರ ಮಧ್ಯದ ವೈರುಧ್ಯಕ್ಕೆ ಶಾಸನಗಳಲ್ಲಿ ಅಲ್ಪಸ್ವಲ್ಪ ಮಾಹಿತಿಯಷ್ಟೇ ಸಿಗುತ್ತದೆ. ಅದೂ ಶೋಷಕರ ಪರವಾದ ಹಿನ್ನೆಲೆಯಲ್ಲಿ ಎನ್ನುವುದು ವಿಶೇಷ. ಅಂದರೆ ಶಾಸನಗಳಲ್ಲಿ ದೊರೆಯುವ ಮಾಹಿತಿಯು ಉಳ್ಳವರ ಪರವಾದ ಮಾಹಿತಿ ಎಂದು ಅರಿತುಕೊಳ್ಳಬೇಕಾಗುತ್ತದೆ. ಹಾಗಾಗಿ ಅಲ್ಲಿ ಅತಿ ಕೆಳಮಟ್ಟದಲ್ಲಿದ್ದು ಸಾಮಾನ್ಯರಿಗೆ ಕಾಣದೆ ಹೋದ ವ್ಯವಸ್ಥೆಯೊಂದು ರೂಪುಗೊಂಡಿರುತ್ತದೆ.

ಈ ಹಿನ್ನೆಲೆಯಿಂದ ಶಾಸನಗಳಲ್ಲಿ ಶೋಷಕವರ್ಗಪರವಾದವು ಮತ್ತು ಸಾಮಾನ್ಯರವು ಎಂಬ ಎರಡು ಮುಖ್ಯ ಭಾಗಗಳನ್ನು ಮಾಡಬಹುದಾಗಿದೆ. ಮೊದಲ ಭಾಗದ ಶಾಸನಗಳ ಸಂಖ್ಯೆ ಹೆಚ್ಚು ಸಾಮಾನ್ಯರವು ಅಂದರೆ ಎರಡನೆಯ ವರ್ಗದ ಶಾಸನಗಳು ತೀರ ಕಡಿಮೆ ಪ್ರಮಾಣದಲ್ಲಿ ನಮಗೆ ಲಭ್ಯವಾಗುತ್ತವೆ. ಈ ಶಾಸನಗಳ ರಚನೆಯ ಪದ್ಧತಿಯನ್ನು ರಾಜಶಾಹಿಯೇ ಪ್ರಾರಂಭಿಸಿತ್ತಾದರೂ ನಂತರ ವಿವಿಧ ಶೋಷಕವರ್ಗಗಳು ಮತ್ತು ಅಕಸ್ಮಾತ್ತಾಗಿ ದುಡಿಯುವ ವರ್ಗಗಳು ಈ ಪದ್ಧತಿಯನ್ನು ಬಳಸಿಕೊಂಡವು. ಅಲ್ಪಸಂಖ್ಯೆಯ ಶೋಷಕ ಅಥವಾ ದುಡಿಯುವ ವರ್ಗದ ಶಾಸನಗಳೇ ಬಹುಪಾಲು. ಅಧಿಕಾರಶಾಹಿಯು ಸಾಮಾಜಿಕ ವ್ಯವಸ್ಥೆಯನ್ನು ಬಳಸಿಕೊಂಡ ರೀತಿಯನ್ನು ಶಾಸನಗಳು ಸ್ಪಷ್ಟವಾಗಿ ಬಿಚ್ಚಿಡುತ್ತವೆ. ಅಧಿಕಾರಶಾಹಿಯು ಅನೇಕ ಸಂದರ್ಭಗಳಲ್ಲಿ

ಪ್ರತಿಫಲವನ್ನು ನೀಡದೆ ಜನರಿಂದ ದುಡಿಸಿಕೊಳ್ಳುತ್ತಿತ್ತು. ಈ ರೀತಿ ಪ್ರಜೆಗಳಿಂದ ದುಡಿಸಿಕೊಳ್ಳುವ ಪದ್ಧತಿ ಪ್ರಾಚೀನ ಭಾರತದಾದ್ಯಂತ ಜಾರಿಯಲ್ಲಿದ್ದಂತೆ ತಿಳಿದುಬರುತ್ತದೆ. ಈ ಕಾಲಘಟ್ಟದಲ್ಲಿಯೇ ಭಾರತೀಯ ಅಥವಾ ಕರ್ನಾಟಕದ ಸಾಮಾಜಿಕ ವ್ಯವಸ್ಥೆಯು ಸಡಿಲವಾಗಿ ಸಮಾಜವು ಅವ್ಯವಸ್ಥೆಯಿಂದ ರೂಪುಗೊಂಡಿರುವುದು ಸೂಕ್ಷ್ಮವಾಗಿ ವ್ಯಕ್ತವಾಗುತ್ತದೆ. ಈ ಕಾಲದಲ್ಲಿಯೇ ಬಹುಮುಖ್ಯವಾಗಿ ವರ್ಣಗಳು ರೂಪುಗೊಂಡಿರುವುದು(ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ) ಅಂದರೆ ಧಾರ್ಮಿಕವಾಗಿ ಅಥವಾ ಸಂಪ್ರದಾಯದ ಹೆಸರಿನಲ್ಲಿ ಸಾಮಾಜಿಕ ಅಥವಾ ಆಡಳಿತದ ಮೇಲೆ ಹಿಡಿತ ಹೊಂದುವುದು, ಅವರಿಗೆ ರಕ್ಷಣೆಯನ್ನು ನೀಡುವುದು, ಆಳ್ವಿಕೆ, ಯುದ್ಧ, ರಕ್ಷಣೆ ಇತ್ಯಾದಿ. ಅವರಿಗೆ ಜೀವನೋಪಾಯಕ್ಕೆ ಬೇಕಾದ ಆವಶ್ಯಕ ವ್ಯವಸಾಯ, ಪಶುಸಂಗೋಪನೆ ಇತ್ಯಾದಿ ಕೆಲಸ ಕಾರ್ಯಗಳನ್ನು ಮಾಡಿಕೊಂಡು ಹೋಗುವುದಕ್ಕಾಗಿ ವೈಶ್ಯ ಹಾಗೂ ಶೂದ್ರ ಎಂಬ ನಾಲ್ಕು ವರ್ಣಗಳನ್ನು ಅಚ್ಚುಕಟ್ಟಾಗಿ ರೂಪಿಸಿ, ಜಾರಿಗೆ ತಂದಿರುವುದು ಅಂದಿನ ಸಾಮಾಜಿಕ ಜಾತಿ ಶ್ರೇಣೀಕರಣದ ವ್ಯವಸ್ಥೆಗೆ ಪೂರಕವಾದ ಅಂಶವಾಗಿದೆ.

ಇಲ್ಲಿ ಪ್ರಾಚೀನ ಕರ್ನಾಟಕದಲ್ಲಿ 'ವರ್ಣಪದ್ಧತಿಯ ಪರಿಪಾಲನೆಯು ಬಹುಮಟ್ಟಿಗೆ ಕುಸಿದು ಹೋಗಿದ್ದಿತು' ಎಂಬುದಾಗಿ ಚಿದಾನಂದಮೂರ್ತಿ ಅವರು ತಮ್ಮ ಸಂಶೋಧನ ಕೃತಿಯಲ್ಲಿ ಹೇಳುತ್ತಾರೆ. ಇದು ಯಾವ ರೀತಿಯಲ್ಲಿ ವರ್ಣಪದ್ಧತಿಯ ಪರಿಪಾಲನೆ ಕುಸಿದುಹೋಗಿತ್ತು ಎಂದು ಅರ್ಥವಾಗುವುದಿಲ್ಲ. ಎಲ್ಲ ಕಾಲದಲ್ಲೂ ಅಂದಿನ ನಾಲ್ಕರಲ್ಲಿ ಮೂರು ವರ್ಣಗಳು ಇಂದು ನಮ್ಮಲ್ಲಿ ಚಲಾವಣೆಯಲ್ಲಿವೆ. ಅಂದರೆ ಮಧ್ಯಯುಗೀನ ಭಾರತದ ಕಾಲದಲ್ಲಿಯೇ ವೃತ್ತಿಗಳೆಲ್ಲವೂ ತಟಸ್ಥವಾಗುವುದನ್ನು ನಾವು ಗುರುತಿಸುತ್ತೇವೆ. ಈ ವೃತ್ತಿ ಆಧಾರದ ಮೇಲೆ ರೂಪುಗೊಂಡಿದ್ದ ಸಮಾಜ ಕ್ರಮೇಣ ವರ್ಣವ್ಯವಸ್ಥೆಗೆ ಪರಿವರ್ತನೆಗೊಂಡು ನಂತರ ಜಾತಿವ್ಯವಸ್ಥೆಗೆ ಪರಿವರ್ತನೆಗೊಂಡಿರುವುದು ಈಗಾಗಲೇ ಸಾಕಷ್ಟು ಚರ್ಚೆಗೆ ಒಳಪಟ್ಟಿದೆ. ವರ್ಣವ್ಯವಸ್ಥೆಗಿಂತ ಮೊದಲು ಜಾತಿಗಳು ಹುಟ್ಟಿಕೊಂಡಿದ್ದವು ಎನ್ನುವ ವಾದವೂ ಇದೆ. ವರ್ಣ ಮತ್ತು ಜಾತಿ ಎನ್ನುವ ಪದಗಳ ಬಗ್ಗೆ ಎಷ್ಟೇ ವ್ಯಾಖ್ಯಾನಗಳು ಬಂದರೂ ಅವುಗಳ ಸಂದರ್ಭದಲ್ಲಿನ ಗೊಂದಲವಂತೂ ನಿವಾರಣೆಯಾಗಿಲ್ಲ. ಸಮಾನ ಧಾರ್ಮಿಕ ಆಚರಣೆಗಳುಳ್ಳ ಜಾತಿಗಳನ್ನು ಒಟ್ಟುಗೂಡಿಸಿ ಅನುಕ್ರಮವಾಗಿ ಶ್ರೇಣೀಕರಿಸುವುದು ವರ್ಣವ್ಯವಸ್ಥೆ. ಆದರೆ ಇದು ವಾಸ್ತವ ಸಾಮಾಜಿಕ ಚಿತ್ರಣವನ್ನು ನೀಡುವುದಿಲ್ಲ.

ಜಾತಿ ಪದವು ಬೇರೆ ಬೇರೆ ಸಂದರ್ಭಗಳಲ್ಲಿ ಬೇರೆ ಬೇರೆ ಅರ್ಥವನ್ನು ಕೊಡುತ್ತಿರುತ್ತದೆ. ಇದರಲ್ಲಿ ನೀತಿ, ನಿಯಮಗಳು ಮೊದಲೇ ರೂಪುಗೊಂಡಿರುತ್ತವೆ. ಮಾನವ ಬದುಕಿದ್ದಾಗ ಮಾತ್ರವಲ್ಲದೆ ಸತ್ತ ಮೇಲೂ ಅವನಿರಬೇಕಾದ ಜಾಗವನ್ನು ಜಾತಿಯೇ ನಿರ್ಧರಿಸುತ್ತದೆ. ಈ ವ್ಯವಸ್ಥೆಯಲ್ಲಿ ಆದಿವಾಸಿ ಬುಡಕಟ್ಟುಗಳು ಹಾಗೂ ಅಲೆಮಾರಿಗಳು ಮನುಷ್ಯವರ್ಗಕ್ಕೆ ಸೇರಿದವರೇ ಅಲ್ಲ ಎನ್ನುವ ವಾದವೊಂದಿದೆ. ಅದೇನೆ ಇರಲಿ ಅವರು ಸವಲತ್ತುಗಳನ್ನು ಪಡೆಯುವುದಾಗಲಿ, ವೃತ್ತಿಗಳನ್ನು ಬದಲಾಯಿಸುವುದಾಗಲಿ ಸಾಧ್ಯವಿರಲಿಲ್ಲ. ಈ ವ್ಯವಸ್ಥೆಯಲ್ಲಿ ಮೆಲ್ವರ್ಗ ಮೇಲ್ವರ್ಗವಾಗಿಯೇ ಇತ್ತು. ಹಾಗೂ ಕೆಳವರ್ಗ ಕೆಳವರ್ಗವಾಗಿಯೇ ಮುಂದುವರಿದಿತ್ತು. ಸಾಮಾಜಿಕ ಯಥಾಸ್ಥಿತಿಯನ್ನು ಕಾಯ್ದುಕೊಳ್ಳಲು ವೇದಗಳ ಮೂಲಕ ಕಾನೂನಿನ ಚೌಕಟ್ಟನ್ನು ನಿರ್ಮಿಸಿ ಬಿಗಿಗೊಳಿಸಲಾಗಿತ್ತು. ಇದಕ್ಕೆ ಮೂಲಕಾರಣವೆಂದರೆ ಬ್ರಾಹ್ಮಣ ಮತ್ತು ಕ್ಷತ್ರಿಯರು ಅಲ್ಪಸಂಖ್ಯಾತರಾಗಿರುವುದೇ ಆಗಿತ್ತು. ಈ ರೀತಿಯ ಶ್ರೇಣೀಕೃತ ಸಾಮಾಜಿಕ ವ್ಯವಸ್ಥೆಯಲ್ಲಿ ಭೂಮಿಯು ನಿರ್ಣಾಯಕ ಪಾತ್ರ ವಹಿಸುತ್ತಿತ್ತು. ಭೂಮಿಯನ್ನು ಹೊಂದಿದ್ದ ಭೂಮಾಲೀಕರು, ಕೃಷಿಕರು ಹಾಗೂ ಇತರ ಉತ್ಪಾದಕ ವರ್ಗಗಳ ಮೇಲೆ ಸಹಜವಾದ ಹಿಡಿತವನ್ನು ಹೊಂದಿರುತ್ತಿದ್ದರು. ಜೊತೆಗೆ(ರಾಜ)ಪ್ರಭುತ್ವದ ಮೇಲೆಯೂ ಸಂಪರ್ಕವನ್ನು ಸಾಧಿಸಿ ವಿಕೇಂದ್ರೀಕೃತ ಆಡಳಿತವ್ಯವಸ್ಥೆಯನ್ನು ಸ್ಥಾಪಿಸುವಲ್ಲಿ ಈ ಭೂಮಾಲೀಕರು ಪ್ರಯತ್ನಶೀಲರಾಗಿರುತ್ತಿದ್ದರು. ಈ ಭೂಮಾಲೀಕರು ಮತ್ತು ಭೂಮಿಯಿದ್ದ ಮಧ್ಯವರ್ತಿಗಳು ಸಮಾಜದ ಮೇಲೆ ಆಡಳಿತಾತ್ಮಕವಾದ ಹಿಡಿತಗಳನ್ನು ಸಾಧಿಸಲು ಹವಣಿಸುತ್ತಿದ್ದರು.

ಇಂಥ ಹವಣಿಕೆಗಳು ಸಮಾಜದ ಸ್ವಾಸ್ಥ್ಯವನ್ನು ಕೆಡಿಸಿ, ಅಸಮಾನತೆಯನ್ನು ಹುಟ್ಟುಹಾಕುತ್ತವೆ. ಇದರಿಂದ ಉತ್ಪಾದಕ ವರ್ಗವು ಇಡೀ ತನ್ನ ಉತ್ಪಾದನೆಯಲ್ಲಿನ ಸುಮಾರು ಭಾಗವನ್ನು ಉತ್ಪಾದಕರಲ್ಲದವರಿಗೆ ನೀಡುವಂತಹ ಅಲಿಖಿತ ನಿಯಮಗಳು ಸಾಮಾಜಿಕವಾಗಿ ರೂಪುಗೊಳ್ಳುತ್ತವೆ. ಅಲ್ಲದೇ ಉತ್ಪಾದಕರು ತಮ್ಮ ಆದಾಯದಲ್ಲಿ ರಾಜ್ಯಾಡಳಿತಕ್ಕೆ ಇಂತಿಷ್ಟು ತೆರಿಗೆ ರೂಪದಲ್ಲಿ ನೀಡಬೇಕು ಎಂಬುದರಿಂದ ಸಹಜವಾಗಿ ಉತ್ಪಾದಕರು ಮತ್ತು ಉತ್ಪಾದಕರಲ್ಲದವರ ಮಧ್ಯದಲ್ಲಿ ಆರ್ಥಿಕತೆಯ ಅಸಮಾನತೆಯ ಹೊಗೆ ಉಂಟಾಗಿ ಅದು ನೇರವಾಗಿ ವರ್ಗದ ಮಟ್ಟದಲ್ಲಿ ಸಂಘರ್ಷವಾಗಿ ರೂಪುಗೊಳ್ಳುವಲ್ಲಿ ಯಶಸ್ವಿಗೊಳ್ಳುತ್ತದೆ.

ಒಂದು ವ್ಯವಸ್ಥೆಯಲ್ಲಿ ಈ ಮೇಲೆ ಚರ್ಚಿಸಿದಂತೆ ಜಮೀನುದಾರರು, ವರ್ತಕರು, ಕುಶಲಕರ್ಮಿಗಳು ಹಾಗೂ ವೃತ್ತಿಗಾರರು ಇರುವುದು ಸಾಮಾನ್ಯ. ಹೀಗೆ ತಮ್ಮ ತಮ್ಮ ವೃತ್ತಿಯಲ್ಲಿ ಆದ ಬದಲಾವಣೆಯ ಹಾಗೂ ಭೂಮಿಯ ಬಳಕೆದಾರರು ಮತ್ತು ಜೊತೆಗೆ ವ್ಯಾಪಾರಿ ಬಂಡವಾಳಗಾರರು ವ್ಯಾಪಾರದಿಂದಾದ ತಮ್ಮ ಮಿತಿ ಮೀರಿದ ಆದಾಯದ ಸಂಗ್ರಹದಿಂದಾಗಿ ಹಾಗೂ ಅವರಲ್ಲಿ ಉಂಟಾದ ಆರ್ಥಿಕ ಪ್ರಬಲತೆಯಿಂದ ಅನೇಕ ಸಾಮಾಜಿಕವಾದ ದುರ್ಬಳಕೆಗಳು ನಡೆಯುತ್ತವೆ. ಹೀಗಿರುವ ಪಕ್ಷದಲ್ಲಿ ವ್ಯಾಪಾರವೆಂಬುದು ಮತ್ತೊಬ್ಬರಿಗೆ ಮಾರಾಟ ಮಾಡುವುದಾಗಿರುತ್ತದೆ. ಕೊಡುಕೊಳ್ಳುವ ಹಾಗೂ ಕೊಂಡುಕೊಳ್ಳುವ ಸಮೂಹವನ್ನು ಗಮನಿಸಿದರೆ, ಅದರಲ್ಲೂ ವರ್ತಕರು ಜೈನ, ಶೈವ, ವೈಷ್ಣವ ಮತ್ತು ಇತರರು ಎಂದು ವಿಭಜಿಸಲು ಅವಕಾಶಗಳಿವೆ. ಕೆಲವು ವರ್ತಕರನ್ನು ಶಾಸನಗಳಿಂದ ಅವರು ನಿರ್ದಿಷ್ಟವಾಗಿ ಯಾವ ಧರ್ಮಕ್ಕೆ ಸೇರಿದವರು ಎಂದು ತಿಳಿಯಬಹುದು. ಆದರೆ ಕೆಲವರನ್ನು ಅವರು ಯಾವ ಧರ್ಮದವರೆಂಬುದನ್ನು ಅರಿಯುವುದು ಕಷ್ಟವಾಗುತ್ತದೆ. ಆದರೂ ಮಧ್ಯಕಾಲೀನ ಯುಗದಲ್ಲಿ ವಾಣಿಜ್ಯ ವ್ಯವಹಾರದಿಂದ, ವರ್ತಕರ ಸಂಘಗಳಿಂದ ಮತ್ತು ಧರ್ಮಕಾರ್ಯಗಳಿಂದ ಪ್ರಭಾವಶಾಲಿಯಾಗಿ ಅವರು ನಿರ್ವಹಿಸಿದ ಕಾರ್ಯ ತುಂಬ ಕುತೂಹಲಕರವಾಗಿದೆ. ಸಮಾಜದಲ್ಲಿ ಆರ್ಥಿಕವಾಗಿ ಪ್ರಬಲರಾಗಿದ್ದ ಈ ವರ್ತಕರು ಕೇವಲ ವ್ಯಾಪಾರ ವಹಿವಾಟಿಗೆ ಸೀಮಿತಗೊಳ್ಳದೆ, ರಾಜಪ್ರಭುತ್ವದಲ್ಲಿ ಆಡಳಿತಾತ್ಮಕವಾದ ಹಿರಿಯ ಹೊಣೆಯನ್ನು ನಿರ್ವಹಿಸಿರುವುದರ ಮೂಲಕ ಅವರ ಪ್ರಭಾವವನ್ನು ಗುರುತಿಸಲು ಸಾಧ್ಯವಾಗುತ್ತದೆ.

ಆರ್ಥಿಕವಾಗಿ ಸಬಲರಾದಂತೆ ತಮ್ಮ ವ್ಯಾಪಾರ ವಹಿವಾಟುಗಳನ್ನು ಮತ್ತಷ್ಟು ವೃದ್ಧಿಸಿಕೊಳ್ಳಲು ವರ್ತಕರು, ಸಾಮಾಜಿಕವಾಗಿ ತಮ್ಮ ಹಿಡಿತವನ್ನು ಬಿಗಿಗೊಳಿಸಲು ಜಮೀನುದಾರರು ತಮ್ಮಲ್ಲಿ ಕ್ರೋಡೀಕರಣಗೊಂಡ ಹಣವನ್ನು ದೇವಾಲಯಗಳ ನಿರ್ಮಾಣಕ್ಕೆ ಬಳಸುತ್ತಿದ್ದರು. ಇದರಿಂದ ಸದ್ದಿಲ್ಲದೆ ಒಂದು ಶೋಷಣಾಕೇಂದ್ರಕ್ಕೆ ವರ್ತಕರು, ಜಮೀನುದಾರರು ಹಾಗೂ ಆರ್ಥಿಕ ಬಲವುಳ್ಳವರು ಪೋಷಕರಾಗುತ್ತಿದ್ದರು. ದೇವಾಲಯಗಳನ್ನು ಒಂದು ಸಾಮಾಜಿಕ ವ್ಯವಸ್ಥೆಯಲ್ಲಿ ಜನಸಾಮಾನ್ಯರ ಮೇಲೆ ತಮ್ಮ ಪ್ರಭಾವವನ್ನು ಬೀರುವ ಅಸ್ತ್ರವನ್ನಾಗಿಸಿಕೊಂಡರು. ಇದರೊಂದಿಗೆ ಧರ್ಮದ ಪುನರ್‌ನವೀಕರಣಗೊಂಡಂತೆ ಹೊಸ ಶೋಷಣಾವ್ಯವಸ್ಥೆಯೊಂದು ಪುರೋಹಿತರ ಅಡಿಯಲ್ಲಿ ಬಂದು ನಿಂತಿತು. ಸಮಾಜದಲ್ಲಿ

ಉಂಟಾದ ದೇವಾಲಯಗಳ ನಿರ್ಮಾಣ, ಅದಕ್ಕೆ ನೀಡುತ್ತಿದ್ದ ಧಾರ್ಮಿಕ ಪ್ರೋತ್ಸಾಹ ಇವೆಲ್ಲವೂ ಶಾಸನಗಳು ಮತ್ತು ಸಮಕಾಲೀನ ಪಠ್ಯಗಳಲ್ಲಿ ಗೋಚರವಾಗುತ್ತವೆ. ಹೀಗೆ ಕೃಷಿ ಮತ್ತು ವ್ಯಾಪಾರಗಳು ಒಂದು ನಾಡಿನ ಆರ್ಥಿಕ ಬುನಾದಿಯನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸಿರುವುದನ್ನು ಕಾಣಬಹುದಾಗಿದೆ.

**ಅಡಿ ಟಿಪ್ಪಣಿಗಳು**

1. ದಿ ರಾಷ್ಟ್ರಕೂಟಾಸ್ ಆಫ್ ಮಾಲ್ಕೇಡ್ : ಸ್ಟಡೀಸ್ ಇನ್ ದೇಯರ್ ಹಿಸ್ಟರಿ ಆ್ಯಂಡ್ ಕಲ್ಚರ್: ಗೋಪಾಲ್ ಬಿ.ಆರ್.; ಪುಟ 129
2. ಎ.ಕ. (ರೈ) 7. ಶಿಕಾರಿಪುರ 185 ಕ್ರಿಸ್ತಶಕ 1158
3. ಎಮ್.ಎ.ಆರ್. – 1933 ತಿ.ನರಸಿಪುರ. 66 ಕ್ರಿಸ್ತಶಕ 1598
4. ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ: ಈಶ್ವರಪ್ಪ ಎಂ.ಜಿ: ಪುಟ 364. ಚಿತ್ರದುರ್ಗ ಜಿಲ್ಲೆಯಲ್ಲಿ ಇವುಗಳನ್ನು ಕ್ರಮವಾಗಿ ಖುಷ್ಕಿ ಮತ್ತು ತರಿ ಜಮೀನುಗಳೆಂದು ಕರೆಯುವ ರೂಢಿ ಇದೆ. ಮನುಷ್ಯ ಪ್ರಯತ್ನದಿಂದ ನಿರ್ಮಾಣವಾದ ಜಮೀನು ತರಿ ಮತ್ತು ಬಾಗಾಯ್ತು[ಅಂದರೆ ತೆಂಗು, ಅಡಕೆ, ಬಾಳೆ, ಎಲೆ, ಮಾವು ಮುಂತಾದುವನ್ನು ಬೆಳೆಯುವ ತೋಟಗಳು] ಚಿತ್ರದುರ್ಗ ಜಿಲ್ಲೆಯ ವ್ಯವಸಾಯ ಜಾನಪದ: ಈಶ್ವರಪ್ಪ ಎಂ.ಜಿ.; ಪುಟ 215–244).
5. ಎ.ಕ. (ರೈ) 6, ಕಡೂರು 134), ಕ್ರಿಸ್ತಶಕ 1177ರ ಬಳ್ಳಾರಿಯ ಒಂದು ಶಾಸನ 'ಕಿಸುಕಾಡು'(ಖಖಖ. ಖಫ(ು) 297
6. ಎಸ್.ಐ.ಐ. 18–240
7. ಕ.ಇ. 1; 24
8. ಎಸ್.ಐ.ಐ. 18: 376
9. ಎ.ಕ.(ರೈ) 5: ಚನ್ನರಾಯಪಟ್ಟಣ 228
10. ಎ.ಕ. (ರೈ) 7 ಸಿರಾ 325 ಕ್ರಿಸ್ತಶಕ 1178
11. ಎ.ಕ. (ರೈ) 12 ಚಿಕ್ಕಮಗಳೂರು 20 ಕ್ರಿ.ಶ. 1188; ಎ.ಕ. 5 ಬೇಲೂರು 175
12. ಎ.ಕ. 5 ಅರಸೀಕೆರೆ 116
13. ಎ.ಕ. 4 ನಾಗ 39
14. ಪ್ರಾಚೀನ ಭಾರತದಲ್ಲಿ ನೀರಾವರಿ: ಕಪಿನೀಪತಿಭಟ್ಟ ಎಚ್.ಸಿ.; ಪುಟ 35; ಕ್ರಿಸ್ತಶಕ 1223ರ ನಾಗಮಂಗಲ; ಎ.ಕ. 4 ನಾಗ 81
15. ಎಸ್.ಐ.ಐ. 9(1) 281
16. ಎಮ್.ಎ.ಆರ್. 1940: 9
17. ಮಾನವಿಕ ಕರ್ನಾಟಕ 9–3: ಪ್ರಾಚೀನ ಕರ್ನಾಟಕದಲ್ಲಿ ನಗರ ಯೋಜನೆ ಮತ್ತು ನೀರಾವರಿ: ಗೋಪಾಲ್ ಬಿ.ಆರ್. ಪುಟ 78.79; ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ : ಮಂಜುನಾಥ್ ಸಿ.ಯು.; ಪುಟ 218–219
18. ಶಾಸನಗಳಲ್ಲಿ ಸ್ತ್ರೀ ಸಮಾಜ: : ಚನ್ನಕ್ಕ ಎಲಿಗಾರ; ಪುಟ 275
19. ಎಸ್.ಐ.ಐ. 20; 293
20. ಎ.ಕ.(ರೈ) 12 ಸಿರಾ 32
21. ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ: ಮಂಜುನಾಥ್ ಸಿ.ಯು.; ಪುಟ 220
22. ಪ್ರಭುತ್ವ ಮತ್ತು ಜನತೆ: ಮೋಹನಕೃಷ್ಣ ರೈ ಕೆ.; ಪುಟ 19
23. ಎಸ್.ಐ.ಐ. 15; 99
24. ಎ.ಕ.(ರೈ) 5 ಚ.ಪಟ್ಟಣ 238
25. ಕರ್ನಾಟಕದ ಶಾಸನಗಳಲ್ಲಿ ವರ್ತಕರು: ಹಿರೇಮಠ ಬಿ.ಆರ್.; ಪುಟ 103
26. ಎ.ಕ.(ರೈ) 6 ಕಡೂರು 238, ಕ್ರಿಸ್ತಶಕ 1203
27. ಎ.ಕ.(ರೈ) 12 ತಿಪಟೂರು 66, ಕ್ರಿಸ್ತಶಕ 1163
28. ಎ.ಕ.(ರೈ) 5 ಅರಸಿಕೆರೆ 88, ಕ್ರಿಸ್ತಶಕ 1148
29. ಎ.ಕ.(ರೈ) 5 ಕಡೂರು 188, ಕ್ರಿಸ್ತಶಕ 1191
30. ಕರ್ನಾಟಕದ ಶಾಸನಗಳಲ್ಲಿ ವರ್ತಕರು: ಹಿರೇಮಠ ಬಿ.ಆರ್.; ಪುಟ 106
31. ಎ.ಕ.(ರೈ) 7 ಶಿಕಾರಿಪುರ 88, ಕ್ರಿಸ್ತಶಕ 1174
32. ಎ.ಕ. 6 ಪಾಂಡವಪುರ 88 ಕ್ರಿಸ್ತಶಕ 1193
33. ಎಸ್.ಐ.ಐ. 15 ರೋಣ–139 ಕ್ರಿಸ್ತಶಕ 1183; ಬಾಗೇವಾಡಿ–129 ಕ್ರಿಸ್ತಶಕ 1176
34. ಎ.ಕ. 5 ತಿ.ನರಸೀಪುರ 322 ಕ್ರಿಸ್ತಶಕ 1179
35. ಎ.ಇಂ. 20 ಬಾಗಲಕೋಟೆ 112 ಕ್ರಿಸ್ತಶಕ 1167
36. ದಿ ಗಿಲ್ಡ್ಸ್ ಆಫ್ ಓ.ಇಲ್.ಮಿಲ್ಲರ್ಸ್ ಇನ್ ಏನ್ಷಿಯೆಂಟ್ ಇಂಡಿಯಾ: ಜಯಪ್ರಕಾಶ: ಪುಟ 307; ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ: ಮಂಜುನಾಥ ಸಿ.ಯು.; ಪುಟ 233
37. ಎಸ್.ಐ.ಐ 18 99; ಶಿಗ್ಗಾವಿ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ನವಲಗುಂದ ಗುರುರಾಜ ಎಸ್.; ಪುಟ 35
38. ಶಿಗ್ಗಾವಿ ತಾಲ್ಲೂಕಿನ ಶಾಸನಗಳ ಸಾಂಸ್ಕೃತಿಕ ಅಧ್ಯಯನ: ನವಲಗುಂದ ಗುರುರಾಜ ಎಸ್.; ಪುಟ 35; ಹಾವೇರಿ ಜಿಲ್ಲಾ ದೇವಾಲಯ ಕೋಶ: ಪುಟ 72
39. ಎ.ಕ.(ರೈ) 5 ತಿ.ನರಸೀಪುರ 88, ಕ್ರಿಸ್ತಶಕ 1226; ಖಖಖ. ಫಫ ಸಿಂದಗಿ 299 ಕ್ರಿಸ್ತಶಕ 12 ಶತ
40. ಎ.ಕ.(ರೈ) 5 ತಿ.ನರಸೀಪುರ 88
41. ಕ.ಇ. 2; 21
42. ಎ.ಕ.(ರೈ) 5 88
43. ಕ.ಇ. 2 33
44. ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ: ಮಂಜುನಾಥ್ ಸಿ.ಯು.; ಪುಟ 221
45. ಎ.ಕ.(ರೈ) 6 ತರೀಕೆರೆ 20, ಕ್ರಿಸ್ತಶಕ 1187
46. ಎ.ಕ. 7 ನಾಗಮಂಗಲ 184, ಕ್ರಿಸ್ತಶಕ 1173
47. ಎ.ಕ.(ರೈ) 4 ಹುಣಸೂರು 24, ಕ್ರಿಸ್ತಶಕ 1162
48. ಪ್ರಭುತ್ವ ಮತ್ತು ಜನತೆ: ಮೋಹನ್‌ಕೃಷ್ಣ ರೈ ಕೆ.; ಪುಟ 94–95
49. ಕ.ಇ. 4 ಹಿರೇಕೆರೂರು 1 ಕ್ರಿ.ಶ. 1204
50. ತುಳುನಾಡಿನ ಶಾಸನಗಳು ಸಂ.36
51. ಎ.ಕ.(ರೈ) 7 ಶಿವಮೊಗ್ಗ 10: ಕ್ರಿ.ಶ. 1085
52. ಸಂಗಮ್ ರಾಜಕೀಯ ಸಾಮಾಜಿಕ ವ್ಯವಸ್ಥೆ: ಸುಬ್ರಮಣಿಯನ್ ಎನ್.; ಪುಟ 243
53. ಶಾಸನಗಳು ಮತ್ತು ಕರ್ನಾಟಕ ಸಂಸ್ಕೃತಿ: ಮಂಜುನಾಥ್ ಸಿ.ಯು ಪುಟ 247
54. ಪ್ರಭುತ್ವ ಮತ್ತು ಜನತೆ: ಪೂರ್ವೋಕ್ತ: ಮೋಹನ್‌ಕೃಷ್ಣ ರೈ: ಪುಟ 127